


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SK NEWS ಕನ್ನಡ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 178 Friday 21-03-2025 E-mail : maruti.b.hosamani76@gmail.com Page: 4 Price : Rs. 1/-


## 13ನೇ ವಾರ್ಡಿನಲ್ಲಿ ಚರಂಡಿಗಳನ್ನು ಸ್ವಚ್ಛ ಗೊಳಿಸದೆ ಜನರ ಆರೋಗ್ಯದ ಜೊತೆ ಪುರಸಭೆಯ ಚೆಲ್ಲಾಟ: ಸಾರ್ವಜನಿಕರಿಂದ ಆಕ್ರೋಶ

**ಸಿಹಿ ಕಹಿ ಸುದ್ದಿ,**

**ನರೇಗಲ್ :** ಗಜೇಂದ್ರಗಡ ತಾಲೂಕಿನ ನರೇಗಲ್ಲಿನ ಪುರಸಭೆ ವ್ಯಾಪ್ತಿಗೆ ಬರುವ ಈಟಿಯವರ ಓಣಿ ಎಂದೇ ಸಾಮಾನ್ಯವಾಗಿ ಕರೆಯಲ್ಪಡುವ 13 ನೇ. ವಾರ್ಡ್ನಲ್ಲಿ ಸ್ವಚ್ಛತೆಯ ಮರೀಚಿಕೆ ಪರಿಕಲ್ಪನೆ ಕಂಡು ಬರುತ್ತಿದೆ ಇದೇ ವಾರ್ಡ್ನಲ್ಲಿ ಕತ್ತಿ ಮಸೂತಿ ಹಾಗೂ ಅದರ ಸುತ್ತ ಮುತ್ತಲಿರುವ ಸ್ಥಳಗಳ ಎದುರಿಗಿರುವ ಚರಂಡಿಗಳನ್ನು ಒಂದು ತಿಂಗಳಾದರೂ ಪುರಸಭೆಯವರು ಸ್ವಚ್ಛ ಗೊಳಿಸಿಲ್ಲ ಇದರಿಂದ ಅಲ್ಲಿ ಕಲುಷಿತ ನೀರು ಶೇಖರಣೆ ಗೊಂಡು ಗಬ್ಬು ವಾಸನೆ ನಾರುತ್ತಿದೆ ಇದರಿಂದ ಸಾರ್ವಜನಿಕರು ಮೂಗು ಮುಚ್ಚಿಕೊಂಡು ನಡೆದಾಡುವ ಸ್ಥಿತಿ ಬಂದಿದೆ.

ಒಂದು ತಿಂಗಳಾದರೂ ಈ ಓಣಿಗೆ ಯಾವುದೇ ಪುರಸಭೆಯ ಅಧಿಕಾರಿಗಳಾಗಲಿ ಸ್ವಚ್ಛತೆ ಕೆಲಸ ಮಾಡುವ ವ್ಯಕ್ತಿಗಳಾಗಲಿ ಈ ಕಡೆ ಗಮನ ಹರಿಸಿಲ್ಲ ಚರಂಡಿ ಒಳಗೆ ಒಂದು ತಿಂಗಳಿಂದ ಕಸ ತುಂಬಿ ಆ ಚರಂಡಿಯ ಹೊಲಸು ನೀರು ಶೇಖರಣೆ ಗೊಂಡು ಸೊಳ್ಳೆಗಳ ಆವಾಸ ಸ್ಥಳವಾಗಿದೆ ಇದ-ರಿಂದ ಎಲ್ಲಿ ನಮಗೆ ಸಾಂಕ್ರಾಮಿಕ ರೋಗ ಬರುವುದು ಎಂದು ಸಾರ್ವಜನಿಕರು ಆಕ್ರೋಶ ಗೊಂಡಿದ್ದಾರೆ.

ಕೆಲವೊಮ್ಮೆ ಕಸ ಗುಡಿಸುವರು ಬೇಕಾ ಬಿಟ್ಟಿಯಾಗಿ ಕಸ ಗೂಡಿಸಿ ಹೋಗುತ್ತಾರೆ ಅದನ್ನು ತುಂಬಿ ಚೆಲ್ಲುವುದು ಬಿಟ್ಟು ಆ ಕಸವನ್ನು ಅದೇ ಚರಂಡಿಯಲ್ಲಿ ದಬ್ಬಿ ಹೋಗುತ್ತಾರೆ ಇದನ್ನು





ಸಾರ್ವಜನಿಕರೇ ನೋಡಿರುವ ಹಲವಾರು ಉದಾಹರಣೆಗಳಿವೆ.

ಇದನ್ನೆಲ್ಲ ಗಮನಿಸಿದರೆ ಪುರಸಭೆಯವರು ಸಾರ್ವಜನಿಕರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿರುವುದು ಅಕ್ಷರ ಸಹ ಸತ್ಯವಾಗಿದೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಪುರಸಭೆಯವರೇ ಹೀಗೆ ಮಾಡಿದರೆ ಜನ ಸಾಮಾನ್ಯರು ಯಾರ ಬಳಿ ತಮ್ಮ ಗೋಳನ್ನು ಹೇಳಿ ಕೊಳ್ಳಬೇಕು ಎಂಬುದೇ ಯಕ್ಷ ಪ್ರಶ್ನೆಯಾಗಿದೆ. ಬೇಲಿಯೇ ಎದ್ದು ಹೊಲ ಮೇದಂತೆ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸುಶೀಲ ವಾಣಿ ಪತ್ರಿಕೆಯ ವರದಿ ಕಂಡ ಮೇಲಾದರೂ ಇದಕ್ಕೆ ಪರಿಹಾರ ಸಿಗುತ್ತದೆಯೇ ಕಾಯ್ದು ನೋಡೋಣ.

**ಜಿಲ್ಲಾ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಎಸ್.ವಿ ಸಂಕನಗೌಡ್ರ**
**ರೋಣ ಗದಗ**

**ಪಟ್ಟಣದಲ್ಲಿರುವ ಪ್ರತಿಯೊಂದು ವಾರ್ಡ್ಗಳಲ್ಲಿನ ಚರಂಡಗಳನ್ನು ಸ್ವಚ್ಛತೆ ಗೊಳ್ಳಿಸುವಂತೆ ನಮ್ಮ ಪೌರ ಕಾರ್ಮಿಕರಿಗೆ ತಿಳಿಸಲಾಗಿರುತ್ತದೆ. ಯಾವ ಕಡೆ ಚರಂಡಿಗಳಲ್ಲಿ ನೀರು ನಿಂತು ದುರ್ವಾಸನೆ ಬೀರುತ್ತಿದೆಯೋ ಅದನ್ನು ಕೂಡಲೇ ನೀರು ಹರಿದು ಹೋಗುವಂತೆ ಸ್ವಚ್ಛತೆ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಸ್ವಚ್ಛತೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲಾಗುತ್ತಿದೆ.**

*** ಪ.ಪಂ ಮುಖ್ಯಾಧಿಕಾರಿ ಮಹೇಶ ನಿಡಶೇಶಿ,**

---

**ವಾರ್ಡ್ ನಂ. 13 ರ ಈಟಿಯವರ ಓಣಿಯಲ್ಲಿ ಹಲವು ದಿನಗಳಿಂದ ಚರಂಡಿಗಳನ್ನು ಸ್ವಚ್ಛ ಗೊಳ್ಳಿಸುವಂತೆ ಪ.ಪಂ ಅಧಿಕಾರಿಗಳಿಗೆ ಹತ್ತು ಹಲವಾರು ಬಾರಿ ತಿಳಿಸಿದರು ಯಾವುದೇ ಪ್ರಯೋಜನವಾಗುತ್ತಿಲ್ಲ. ಚರಂಡಿಗಳಲ್ಲಿ ಸೊಳ್ಳೆಗಳು ಹೆಚ್ಚಾಗುತ್ತಿರುವುದರಿಂದ ಓಣಿಯಲ್ಲಿ ಸಾಂಕ್ರಾಮಿಕ ರೋಗದ ಭೀತಿ ಪ್ರಾರಂಭವಾಗಿದೆ. ಕೂಡಲೇ ಪ.ಪಂ ವತಿಯಿಂದ ಸ್ವಚ್ಛತೆಗೆ ಮುಂದಾಗದಿದ್ದಲ್ಲಿ ಹೋರಾಟ ಮಾಡಬೇಕಾಗುತ್ತದೆ.**

*** ನಿವಾಸಿ ವೀರೇಶ ಬಂಗಾರಶೆಟ್ರ.**

## ಸಂಭ್ರಮದಿಂದ ಸಾಗಿದ ಶರಣ ಬಸವೇಶ್ವರ ರಥೋತ್ಸವ ಕಾರ್ಯಕ್ರಮ ಜರಗಿತು




**ಸಿಹಿ ಕಹಿ ಸುದ್ದಿ,**

**ಇಳಕಲ್ಲ :** ನಗರದ ಕುಲಕರ್ಣಿ ಪೇಟೆಯ ಆರಾಧ್ಯ ದೈವ ಶ್ರೀ ಶರಣ ಬಸವೇಶ್ವರ ರಥೋತ್ಸವಕ್ಕೆ ಹರಿದು ಬಂದ ಭಕ್ತ ಸಾಗರ.

ಬರಗಾಲ ಬಂಟ, ದಾಸೋಹ ಮೂರ್ತಿ, ಕಲಬುರ್ಗಿಯ ಶ್ರೀ ಶರಣಬಸವೇಶ್ವರ 203 ನೇ. ಜಾತ್ರಾ ಮಹೋತ್ಸವ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಾ 19. ರಂದು ಇಳಕಲ್ ನಗರದ ಕುಲಕರ್ಣಿ ಪೇಟೆಯ ಆರಾಧ್ಯ ದೈವ ಶ್ರೀ ಶರಣಬಸವೇಶ್ವರ ರಥೋತ್ಸವವು ಸಂಭ್ರಮದಿಂದ ಸಾಗಿತು.

ಯುವಕರು ಶರಣ ಬಸವೇಶ್ವರ ಮಹಾರಾಜ್ ಕಿ ಜೈ ಕಾರ ಹಾಕುತ್ತಾ ಘೋಷಣೆಗಳ ಮೂಲಕ ರಥ ಎಳೆದರು.

ದೇವಸ್ಥಾನದಿಂದ ಹೊರಟ ರಥವು ಪಾದಗಟ್ಟಿಯ ವರೆಗೆ ಸಾಗಿ ಕೆಲ ಹೊತ್ತು ಅಲ್ಲಿಯೇ ತಂಗಿದ ಸಂದರ್ಭದಲ್ಲಿ
ರಥ ಮುಟ್ಟಿ ನಮಸ್ಕರಿಸಲು ಭಕ್ತಾದಿಗಳು ಮುಗಿಬಿದ್ದರು,
ನಂತರ ಹಿಮ್ಮುಖವಾಗಿ ಹೊರಟ ರಥ ಮೂಲ ಸ್ಥಳಕ್ಕೆ ಬಂದು ಸಮಾಪನ ಗೊಂಡಿತು. ಜೋಡಿ ಮೂರ್ತಿಯ
ರಥೋತ್ಸವಕ್ಕೆ ವನಿತೆಯರು ಹೊಸ ಮೆರಗು ನೀಡಿದರು.

ಶರಣ ಬಸವೇಶ್ವರರ ಪದಗಳನ್ನು ಹಾಡುತ್ತ, ವಾದ್ಯ ಮೇಳಗಳು ಮೊಳಗಿದವು, ರಥದ ಹಿಂದುಗ-'ಡೆ 'ಆರತಿ ತಟೆ' ಹಿಡಿದ ಹೆಣ್ಣುಮಕ್ಕಳು ಹೆಜ್ಜೆ ಹಾಕಿದರು, ವರ್ಣಮಯ ಇಳಕಲ್ ಸೀರೆ, ಆಭರಣ ತೊಟ್ಟು, ಹಣೆಗೆ ವಿಭೂತಿ ಧರಿಸಿ ಬಂದ ಗೃಹಿಣಿಯರು ಶರಣಬಸವೇಶ್ವರರ ಪದಗಳನ್ನು ಹಾಡುತ್ತಾ ಸಾಗಿದರು. ಇದೇ ಸಂದರ್ಭದಲ್ಲಿ ಯುವಕ- ಯುವತಿ ಯರು ತಮ್ಮ ಮೊಬೈಲ್ ಮೂಲಕ ಎಳೆಯುತ್ತಿರುವ ರಥದ ಜೊತೆಗೆ ಪಟಾಕಿ ದೃಶ್ಯವನ್ನು ಸೆರೆ ಹಿಡಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಪ್ರತಾಪ್.ವಾಯ್.ಕಿಳ್ಳಿ.ಇಲಕಲ್ಲ**

## ಕೊಪ್ಪಳ: ಜಾನಪದ ಕಾರ್ಯಕ್ರಮಗಳ ಮೂಲಕ ತಂಬಾಕು ನಿಯಂತ್ರಣಕ್ಕೆ ಜಾಗೃತಿ

**ಕೊಪ್ಪಳ:**ತಂಬಾಕುಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಜಾನಪದ ಕಾರ್ಯಕ್ರಮಗಳ ಮೂಲಕ ತಂಬಾಕು ನಿಯಂತ್ರಣಕ್ಕೆ ಕೊಪ್ಪಳ ಬಸ್ ನಿಲ್ದಾಣದಲ್ಲಿ ಇತ್ತೀಚೆಗೆ ವಿಶೇಷ ಜಾಗೃತಿ ಮೂಡಿಸಲಾಯಿತು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಘಟಕಜಿಲ್ಲಾತಂಬಾಕು ನಿಯಂತ್ರಣ ಕೊಶ ಕೊಪ್ಪಳ ಹಾಗೂ ಶ್ರೀ ಕಾರ್ಗಿಲ್ ಮಲ್ಲಯ್ಯ ಅಂಗವಿಕಲರ ಸಂಘ, ಅಳವಂಡಿ ಇವರ ಸಹಯೋಗದಲ್ಲಿ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆಆಗುವದುಷ್ಪರಿಣಾಮಗಳು ಕುರಿತು ಜಾನಪದ ಸಂಗೀತ ಬೀದಿ ನಾಟಕ ಕಾರ್ಯಕ್ರಮ ನಡೆಯಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತಾಲೂಕಿನ ಆರೋಗ್ಯ ಶಿಕ್ಷಣಾಧಿಕಾರಿ



ಗಂಗಮ್ಮ ಕಳಾಸಪುರ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ತಂಬಾಕು ಸೇವನೆಯಿಂದ ಅನಾರೋಗ್ಯ ಉಂಟಾಗುತ್ತದೆ. ತಂಬಾಕಿನ ನಿಕೋಟಿನ್ ಅಂಶದಿಂದ ನಮ್ಮ ದೇಹವು ಕ್ಯಾನ್ಸರ್,ದಂತಕ್ಷಯ,ಗರ್ಭಪಾತ, ಹೃದಯ ರೋಗ ಸಮಸ್ಯೆ ಗಂಟಲು ನೋವು, ಮೂತ್ರಕೋಶ ತೊಂದರೆ ಸೇರಿದಂತೆ ಇನ್ನೂ ಅನೇಕ ಸಮಸ್ಯೆಗಳಿಗೆ ತುತ್ತಾಗಿ ಸಾವನ್ನು ತರುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿತ ಕಾನೂನು ಜಾರಿಯಲ್ಲಿದೆ. ತಂಬಾಕು ಸೇವನೆ ಆರೋಗ್ಯಕ್ಕೆ ತುಂಬಾ ಹಾನಿಕಾರಕವಾಗಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಶಾಂತಮ್ಮ ಅವರು ಮಾತನಾಡಿ, ತಂಬಾಕು ಸೇವನೆಯಿಂದ ಭಾರತ ದೇಶದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಜನರು ಮರಣ ಹೊಂದುತ್ತಿದ್ದಾರೆ. ಶೇಕಡ 15ರಷ್ಟು ಯುವ ಪೀಳಿಗೆ ಬಲಿಯಾಗಿ ಕ್ಯಾನ್ಸರ್ ಎಂಬ ಮಹಾಮಾರಿಗೆ ತುತ್ತಾಗುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಮತ್ತುಧೂಮಪಾನಮಾಡುವುದು ಶಿಕ್ಷಾಹಾರ ಅಪರಾಧವಾಗಿರುತ್ತದೆ ಸಾರ್ವಜನಿಕರು ಇದರ ಬಗ್ಗೆ ಅರಿತು ಜಾಗೃತರಾಗಬೇಕು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ ಮೂಲಕ ರಾಷ್ಟ್ರೀಯ ತಂಬಾಕು ನಿಯಂತ್ರಣ ಯೋಜನೆ ಅಡಿಯಲ್ಲಿ ಪ್ರಸನ್ನ ಮುಕ್ತ ಕೇಂದ್ರಗಳ ಮೂಲಕ ತಂಬಾಕು ಸೇವನೆ ದುಷ್ಪರಿಣಾಮಗಳ ಕುರಿತು ಆಪ್ತ ಸಮಾಲೋಚನೆ ಮೂಲಕ ಸೂಕ್ತ ಚಿಕಿತ್ಸೆ ಮತ್ತು ಸಲಹೆ ಮಾರ್ಗದರ್ಶನ ಮೂಲಕ ತಂಬಾಕು ಚಟ್ಟವನ್ನು ಬಿಡಿಸಲಾಗುತ್ತದೆ ಎಂದು ತಿಳಿಸಿದರು. ಇದೆ ಸಂದರ್ಭದಲ್ಲಿ ಸಾಮಾಜಿಕಕಾರ್ಯಕರ್ತೆ ಸರಸ್ವತಿ ಸೇರಿದಂತೆ ಮತ್ತಿತರರಿದ್ದರು.

ಅಳವಂಡಿಯ ಶ್ರೀ ಕಾರ್ಗಿಲ್ ಮಲ್ಲಯ್ಯ ಅಂಗವಿಕಲರ ಸಂಘದ ಕಲಾವಿದರಾದ ವೀರೇಶ ಹಾಲಗುಂಡಿ, ಸಿದ್ದಲಿಂಗಯ್ಯ ಗೋಲ್ರೇಕೊಪ್ಪ, ವಿರುಪಾಕ್ಷ ಎಡಿಯಪುರ್ ಮಹಾದೇವಪ್ಪ ಐನಕ್ಕನವರ, ವಸಂತ ಉಳ್ಳಾಗಡ್ಡಿ ಉಮೇಶ್ ಸಿದ್ದಲಿಂಗಮ್ಮ ಹಾಲಗುಂಡಿ, ಶಿವಲಿಂಗಮ್ಮ ಹಲಗಿ ಕಲಾವಿದರು ತಂಬಾಕು ಸೇವನೆಯಿಂದಆರೋಗ್ಯದಮೇಲೆ ಆಗುವ ದುಷ್ಪರಿಣಾಮಗಳ ಕುರಿತು ಹಾಗೂ ತಂಬಾಕು ನಿಯಂತ್ರಣ ಕುರಿತು ಜಾನಪದ ಸಂಗೀತ ಬೀದಿ ನಾಟಕ ಕಲಾಭಿನಯದ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಿದರು.

## ನಿವೃತ್ತ ವೃತ್ತಿ ಶಿಕ್ಷಕ ನದಾಫ್‌ಗೆ ಭಾರತ ವಿಕಾಸ ರತ್ನ ರಾಷ್ಟ್ರ ಪ್ರಶಸ್ತಿ ಪ್ರಧಾನ



**ಕೊಪ್ಪಳ :** ನಗರದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ವೃತ್ತಿ ನಿವೃತ್ತ ಶಿಕ್ಷಕ ಅಮೀರ್ ಹಮ್ಜಾ ನದಾಫ್ ರವರಿಗೆ ಅವರ ಉತ್ತಮ ವೃತ್ತಿ ಶಿಕ್ಷಣ ಸೇವೆಗಾಗಿ ಭಾರತ ವಿಕಾಸರತ್ನ ರಾಷ್ಟ್ರ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು,

ಬೆಂಗಳೂರಿನ ರವೀಂದ್ರಕಲಾಕ್ಷೇತ್ರ ಆವರಣದಲ್ಲಿರುವ ನಯನ ರಂಗ ಮಂದಿರ ಸಭಾಂಗಣದಲ್ಲಿ ಸುರುವೇ ಕಲ್ಚರಲ್ ಅಕಾಡೆಮಿ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಏರ್ಪಡಿಸಿದ ವಿವಿಧ ಸಾಧಕರಿಗೆ ಪ್ರಶಸ್ತಿ ವಿತರಣೆ ಸಮಾರಂಭದಲ್ಲಿ ಕೊಪ್ಪಳ ದ ಅಮೀರ್ ಹಮ್ಜಾ ನದಾಫ್ ರವರಿಗೆ ಅವರ ಉತ್ತಮ ಸಮಾಜ ಸೇವೆ ಗಾಗಿ ಪ್ರಶಸ್ತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾಜಿ ಸಚಿವರಾದ ಡಾ, ಲೀಲಾದೇವಿ ಆರ್, ಪ್ರಸಾದ್ ರವರು ಪ್ರಧಾನ ಮಾಡಿ ಸತ್ಕರಿಸಿದರು, ಈ ಸಂದರ್ಭದಲ್ಲಿ ಸಿನಿಮಾ ನಟರಾದ ಮೀನಾ, ಶಂಕರ್ ಭಟ್ ಮತ್ತು ಎಂಜಿಆರ್ ಅರಸ್ ಅಲ್ಲದೆ ಸಾಹಿತಿ ಡಾ. ರಾಜೇಂದ್ರ ಗಡದ್ ಹಾಗೂ ಶ್ರೀಮತಿ ನಳಿನಿ ,ಕಾರ್ಯಕ್ರಮ ಸಂಘಟಕ ರಮೇಶ್ ಸುರುವೇ ಪಾಲ್ಗೊಂಡಿದ್ದು ಡಾ. ಕಲ್ಮೇಶ್ವರ ಸ್ವಾಮಿ ಬೆಳಗಾವಿ ರವರು ಸಮಾರಂಭದ ಸಾನಿಧ್ಯ ವಹಿಸಿದ್ದರು.

ಅಮೀರ್ ಹಮ್ಜಾ ನದಾಫ್ ರವರಿಗೆ ಅವರ ಉತ್ತಮ ಸೇವೆಗಾಗಿ ರಾಷ್ಟ್ರಮಟ್ಟದ ಭಾರತ ರತ್ನ ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಲಭಿಸಿರುವುದಕ್ಕೆ ಕೊಪ್ಪಳದ ವಿವಿಧ ಸಂಘಟನೆ ಅಲ್ಲದೆ ನದಾಫ್ ಪಿಂಜಾರ್ ಸಂಘಟನೆ ಮತ್ತು ಮುಸ್ಲಿಂ ಸಂಘಟನೆ ಗಳು ಅಲ್ಲದೆ ಕೊಪ್ಪಳದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಶಿಕ್ಷಕರು ,ಪ್ರಾಚಾರ್ಯರು, ಹಾಗೂ ವಿದ್ಯಾರ್ಥಿಗಳ ಬಳಗ ಮತ್ತು ಸ್ನೇಹಿತರ ಬಳಗ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

## ವಿಮಾ ಪಾಲಿಸಿ ಪರಿಹಾರ ಪಾವತಿಸಲು ಇನ್ಸೂರೆನ್ಸ್ ಕಂಪನಿಗೆ ಆದೇಶ

**ಕೊಪ್ಪಳ :** ಫಿರ್ಯಾದುದಾರರಿಗೆ ವಿಮಾ ಪಾಲಿಸಿ ಪರಿಹಾರ ಪಾವತಿಸಲು ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಇನ್ಸೂರೆನ್ಸ್ ಕಂಪನಿಗೆ ಆದೇಶ ನೀಡಿದೆ.

ಗ್ರಾಹಕ ಫಿರ್ಯಾದು ಸಂಖ್ಯೆ:30/2024 ರಲ್ಲಿನಅಂತಿಮತೀರ್ಪಿನಸಾರಾಂಶದನ್ವಯ ಫಿರ್ಯಾದುದಾರರಾದ ರಮೇಶ ಕೆಸಕಿ, ಹಂಚಿನಾಳ, ತಾ:ಗಂಗಾವತಿ ಇವರ ತಂದೆಯಾದ ದಿ: ಸಣ್ಣ ಲಚಮಪ್ಪ ಇವರು ಎದುರುದಾರರಾದಮ್ಯಾಕ್ಸ್‌ಲೈಫ್‌ಇನ್ಸೂರೆನ್ಸ್ ಕಂಪನಿ ಲಿ., ಗುರುಗ್ರಾಮ್ (ಒಚಿಥ ಖಜಿಜ ಖಟಣಡಿಚಿಟಿಛಿಜ ಅಔಟಠಿಚಿಟಿಥಿ ಐಣಜ., ಉಹಿಡಿಹಾಂಡಿಚಿಟ) ಮತ್ತು ಇನ್ನೊಬ್ಬರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ. ಈ ದೂರಿನ ಸಾರಂಶ ಏನೆಂದರೆ ದೂರುದಾರರ ತಂದೆ ಸಣ್ಣ ಲಚಮಪ್ಪ ತಮ್ಮ ಜೀವಿತಾವಧಿಯಲ್ಲಿ ಚಿನ್ನದ ಆಭರಣಗಳನ್ನು ಅಡವಿಟ್ಟು 2ನೇ ಎದುರುದಾರರ ಆಕ್ಸಿಸ್ ಬ್ಯಾಂಕಿನಿಂದ ರೂ. 9,90,000 ಗಳಷ್ಟು ಚಿನ್ನದ ಸಾಲವನ್ನು ಪಡೆದಿದ್ದರು. ಚಿನ್ನದ ಸಾಲದ ಭದ್ರತೆಗಾಗಿ 1ನೇ ಎದುರುದಾರರ ಮ್ಯಾಕ್ಸ್ ಲೈಫ್ ಇನ್ಸೂರೆನ್ಸ್ ಕಂಪನಿ ಲಿ., ಗುರುಗ್ರಾಮ್ ಇವರಲ್ಲಿ ಮ್ಯಾಕ್ಸ್‌ಲೈಫ್‌ಗ್ರೂಪ್ ಟರ್ಮ ಲೈಫ್ ಪ್ಲಾಟಿನಮ್ ಅಶ್ಯೂರೆನ್ಸ್ ಪಾಲಸಿಯನ್ನು ಪಡೆದುಕೊಂಡಿದ್ದಾರೆ. ಈ ಪಾಲಸಿಗೆ ದೂರುದಾರರೇ ನಾಮಿನಿಯಾಗಿರುತ್ತಾರೆ. ದೂರುದಾರರ ತಂದೆ ವಿಮಾದಾರರು ದಿನಾಂಕ: 10-09-2022 ರಂದು ಹೃದಯಘಾತದಿಂದ ಮೃತಹೊಂದಿರುತ್ತಾರೆ. ಆತನ ಮರಣದ ನಂತರ ದೂರುದಾರರು ಎದುರುದಾರ ನಂ-1ರ ಕಂಪನಿಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಕ್ಲೇಮ್ ಸಲ್ಲಿಸಿ 1ನೇ ಎದುರುದಾರರವರು ವಿಮಾ ಮೊತ್ತವನ್ನು 2ನೇ ಎದುರುದಾರರ ಬ್ಯಾಂಕ್‌ಗೆ ಸಾಲದ ಬಾಕಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಡಲು ಕೋರಿರುತ್ತಾರೆ. 1ನೇ ಎದುರುದಾರರಾದ ವಿಮಾ ಕಂಪನಿಯವರು ದಿನಾಂಕ 23-03-2023 ರಂದು ಪತ್ರವನ್ನು ಬರೆದಿದ್ದು, ಆ ಪತ್ರದಲ್ಲಿ ತನಿಖೆಯ ಸಮಯದಲ್ಲಿ, ಪಾಲಸಿಯನ್ನು ನೀಡುವ ಸಮಯದಲ್ಲಿ ವಿಮಾದಾರರು ಪ್ರಸ್ತಾವನೆಯಲ್ಲಿ ಬಹಿರಂಗಪಡಿಸಿದ ಮಾಹಿತಿ ಮತ್ತು ದಾಖಲೆಗಳ ವಿವರಗಳು ಸುಳ್ಳು ಎಂದು ತಿಳಿಸಿ ಪಾಲಿಸಿ ಮೊತ್ತವನ್ನು ನೀಡಲು ನಿರಾಕರಿಸಿರುತ್ತಾರೆ. 2ನೇ ಎದುರುದಾರರು ದೂರುದಾರರ ತಂದೆಗೆ ಚಿನ್ನದ ಸಾಲವನ್ನು ಅಗತ್ಯ ದಾಖಲೆಗಳನ್ನು ಪಡೆದು ಸಾಲ ಮಂಜೂರು ಮಾಡಿರುತ್ತಾರೆ. 2ನೇ ಎದುರುದಾರರು ದೂರುದಾರರ ತಂದೆ ಸಣ್ಣ ಲಚಮಪ್ಪ ಹೆಸರಿಗೆ ಸಾಲದ ಭದ್ರತೆಗಾಗಿ 1ನೇ ಎದುರುದಾರರ ವಿಮಾ ಕಂಪನಿಯಲ್ಲಿ ಸೂಕ್ತ ದಾಖಲೆಗಳನ್ನು ಒದಗಿಸಿ ಹಾಗೂ ವಿಮಾ ಕಂತನ್ನು ಪಾವತಿಸಿ ಪಾಲಿಸಿಯನ್ನು ಪಡೆದಿರುತ್ತಾರೆ. 1ನೇ ಎದುರುದಾರರ ಕಂಪನಿಯು ವಿನಾ:ಕಾರಣ ವಿಮಾ ಪಾಲಿಸಿಯ ಪರಿಹಾರದ ಮೊತ್ತವನ್ನು ನೀಡದೇ ಸೇವಾ ನ್ಯೂನ್ಯತೆಯನ್ನು ಎಸಗಿರುತ್ತಾರೆ. ಆದ್ದರಿಂದ ದೂರುದಾರರು ಎದುರುದಾರರ ವಿರುದ್ಧ ಕೊಪ್ಪಳ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಅಯೋಗಕ್ಕೆ ಪರಿಹಾರವನ್ನು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

ಕೊಪ್ಪಳಜಿಲ್ಲಾಗ್ರಾಹಕರವ್ಯಾಜ್ಯಗಳಪರಿಹಾರ ಆಯೋಗವು ದೂರನ್ನು ದಾಖಲಿಸಿಕೊಂಡ ನಂತರ ಜಿಲ್ಲಾ ಆಯೋಗದ ಅಧ್ಯಕ್ಷರಾದ ಜಿ.ಇ.ಸೌಭಾಗ್ಯಲಕ್ಷ್ಮೀ ಹಾಗೂ ಸದಸ್ಯರಾದ ರಾಜು.ಎನ್.ಮೇತ್ರಿ ರವರು ವಾದ ಪ್ರತಿವಾದಗಳನ್ನು ಆಲಿಸಿದ ನಂತರ 1ನೇ ಎದುರುದಾರ ಮ್ಯಾಕ್ಸ್ ಲೈಫ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಇವರ ವಿರುದ್ಧ ದೂರುದಾರರ ತಂದೆ ಸಣ್ಣ ಲಚಮಪ್ಪರವರ ಚಿನ್ನದ ಸಾಲದ ಭದ್ರತೆಗಾಗಿ ಮಾಡಿದ ಪಾಲಿಸಿಯ ವಿಮಾ ಮೊತ್ತ ರೂ.9,90,000 ಗಳನ್ನು ಚಿನ್ನದ ಸಾಲದ ಖಾತೆ ಸಂಖ್ಯೆ ನಂ:922060052242813ಕ್ಕೆ 2ನೇ ಎದುರುದಾರ ಆಕ್ಸಿಸ್ ಬ್ಯಾಂಕಿಗೆ ಪಾವತಿಸಲು ಆದೇಶಿಸುತ್ತಾ, ವಿಮಾ ಮೊತ್ತ ರೂ. 9,90,000 ಗಳಿಗೆ ವಾರ್ಷಿಕ 6% ಬಡ್ಡಿಯನ್ನು ಮಾತ್ರ ದೂರಿನ ದಿನಾಂಕದಿಂದ ಪಾವತಿಯಾಗುವವರೆಗೆ ದೂರುದಾರರಿಗೆ 1ನೇ ಎದುರುದಾರರು ಪಾವತಿಸಬೇಕು ಹಾಗೂ ದೂರುದಾರರಿಗೆ ಉಂಟಾದ ಮಾನಸಿಕ ಯಾತನೆಗಾಗಿ ರೂ. 10,000 ಮತ್ತು ದೂರಿನ ಖರ್ಚು ರೂ. 5,000 ಗಳನ್ನು ದೂರುದಾರರಿಗೆ ಪಾವತಿಸುವಂತೆ ಹಾಗೂ ಮೇಲೆ ಹೇಳಿದ ಪರಿಹಾರದ ಮೊತ್ತವನ್ನು ಈ ಆದೇಶದ ದಿನಾಂಕದಿಂದ 45 ದಿನಗಳ ಒಳಗಾಗಿ 1ನೇ ಎದುರುದಾರರು ಪಾವತಿಸುವಂತೆ ಆದೇಶವನ್ನು ನೀಡಿರುತ್ತಾರೆ.

## ಕುಡಿಯುವ ನೀರು: ಸಹಾಯವಾಣಿ ಸ್ಥಾಪನೆ

**ಕೊಪ್ಪಳ :** ಕುಷ್ಟಗಿ ತಾಲೂಕ ಮಟ್ಟದ ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಸಹಾಯವಾಣಿ ಸ್ಥಾಪಿಸಲಾಗಿದೆ ಎಂದು ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

ಬೇಸಿಗೆ ನಿಮಿತ್ಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ತಾಲೂಕ ಮಟ್ಟದ ಸಹಾಯವಾಣಿ ಕೇಂದ್ರ ಹಾಗೂ ಕುಷ್ಟಗಿ ತಾಲೂಕಿನ 36 ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಸಹಾಯವಾಣಿಗಳನ್ನು ಸ್ಥಾಪಿಸಲಾಗಿದ್ದು, ಕುಷ್ಟಗಿ ತಾ.ಪಂ ಕಾರ್ಯಾಲಯದ ಸಹಾಯವಾಣಿ ಸಂಖ್ಯೆ: 7899986581ಕುಷ್ಟಗಿತಹಶೀಲ್ದಾರಕಾರ್ಯಾಲಯದ ಸಹಾಯವಾಣಿ ಸಂಖ್ಯೆ: 9449393400 ಹಾಗೂ ಕುಷ್ಟಗಿಗ್ರಾಮೀಣಕುಡಿಯುವನೀರುಮತ್ತುನೈರ್ಮಲ್ಯ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಮೊ.ಸಂ: 8197159266 & 8861310786 ಆಗಿರುತ್ತದೆ.

ಗ್ರಾ.ಪಂ ಸಹಾಯವಾಣಿ ವಿವರ: ಕುಷ್ಟಗಿ ತಾಲ್ಲೂಕಿನ ಅಡವಿಬಾವಿ ಸಹಾಯವಾಣಿ 7625098144, ಅಂಟರಠಾಣಾ 7625098145, ಬೆನಕನಾಳ 7625098146, ಬಿಜಕಲ್ 7625098147, ಬಿಳೇಕಲ್ 7625098148, ಚಳಗೇರಾ 7625098149, ದೋಟಿಹಾಳ 7625098150, ಗುಮಗೇರಾ 7625098151, ಹಾಬಲಕಟ್ಟಿ 7625098152, ಹನುಮನಾಳ 7625098153, ಹನುಮಸಾಗರ 7625098154, ಹಿರೇಬನ್ನಿಗೋಳ 7625098155, ಹಿರೇಗೊಣ್ಣಾಗರ 7625098156, ಹಿರೇಮನ್ನಾಪೂರ 7625098157, ಹಿರೇನಂದಿಹಾಳ 7625098158, ಹೂಲಗೇರಾ 7625098159, ಜಾಗೀರಗುಡದೂರು 7625098160, ಜುಮಲಾಪೂರ 7625098161, ಕಬ್ಬರಗಿ 7625098162, ಕಂದಕೂರು 7625098163, ಕಾಟಾಪೂರ 7625098164, ಕೇಸೂರು 7625098165, ಕಿಲ್ಲಾರಹಟ್ಟಿ 7625098166, ಕೊರಡಕೇರಾ 7625098167, ಕ್ಯಾದಿಗುಪ್ಪ 7625098168, ಲಿಂಗದಹಳ್ಳಿ 7625098169, ಮಾಲಗಿತ್ತಿ 7625098170, ಮೆಣೆದಾಳ 7625098171, ಮುದೇನೂರು 7625098172, ನಿಲೋಗಲ್ 7625098173, ಸಂಗನಾಳ 7625098174, ಶಿರಗುಂಪಿ 7625098175, ತಳವಗೇರಾ 7625098176, ತುಗ್ಗಲದೋಣಿ 7625098177, ತುಮರಿಕೊಪ್ಪ 7625098178 ಹಾಗೂ ಯರಗೇರಾ ಗ್ರಾ.ಪಂ 7625098179, ಕುಷ್ಟಗಿ ತಾಲ್ಲೂಕಿನ ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಆಯಾ ಸಹಾಯವಾಣಿ ಸಂಖ್ಯೆಗಳ ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಜನತೆಗೆ ಮತ್ತೊಂದು ಬೆಲೆ ಏರಿಕೆ ಬಿಸಿ: ಶೀಘ್ರದಲ್ಲೇ ನೀರಿನ ದರ ಹೆಚ್ಚಳ

**ಬೆಂಗಳೂರು :** ಈಗಾಗಲೇ ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಹಾಗೂ ನಮ್ಮ ಮೆಟ್ರೋ ದರ ಏರಿಕೆಯಿಂದ ತತ್ತರಿಸಿರುವ ರಾಜಧಾನಿ ಬೆಂಗಳೂರಿನ ಜನತೆಗೆ ರಾಜ್ಯ ಸರ್ಕಾರ ಮತ್ತೊಂದು ದರ ಹೆಚ್ಚಳ ಶಾಕ್ ನೀಡಲು ಮುಂದಾಗಿದೆ. 2014 ರಿಂದ ಬೆಂಗಳೂರಿನಲ್ಲಿ ನೀರಿನ ದರ ಪರಿಷ್ಕರಿಸಲಾಗಿಲ್ಲ. ಹೀಗಾಗಿ ಬೆಂಗಳೂರು ಜಲ ಮಂಡಳಿ(ಃಘಖಖಃ)ಯು 7–8 ಪೈಸೆ ದರ ಏರಿಕೆಗೆ ಪ್ರಸ್ತಾವನೆಸಲ್ಲಿಸಿದೆ.ಆದರೆರಾಜ್ಯಸರ್ಕಾರಪ್ರತಿಲೀಟರ್‌ಗೆ ಕೇವಲ ಒಂದು ಪೈಸೆ ಹೆಚ್ಚಳವನ್ನು ಪರಿಗಣಿಸುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ವಿಧಾನ ಪರಿಷತ್ತಿಗೆ ತಿಳಿಸಿದ್ದಾರೆ. ನೀರಿನ ದರ ಹೆಚ್ಚಳದ ಬಗ್ಗೆ ಶೀಘ್ರದಲ್ಲೇ ಬೆಂಗಳೂರಿನ ಶಾಸಕರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

ಇಂದು ವಿಧಾನ ಪರಿಷತ್ತಿನಲ್ಲಿ ಶೂನ್ಯ ವೇಳೆಯಲ್ಲಿ ಕಾಂಗ್ರೆಸ್ ಎಂಎಲ್‌ಸಿ ರಾಮೋಜಿ ಗೌಡ ಅವರು ಬೆಂಗಳೂರಿನ ಪೂರ್ವ ಭಾಗಗಳಲ್ಲಿ ನೀರಿನ ಕೊರತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದಾಗ ಡಿಸಿಎಂ ಈ ಹೇಳಿಕೆ ನೀಡಿದ್ದಾರೆ. 2014 ರಿಂದ ನೀರಿನ ದರವನ್ನು ಹೆಚ್ಚಿಸಲಾಗಿಲ್ಲ. ಇದರಿಂದಾಗಿ BWSSB ವಾರ್ಷಿಕ 1,000 ಕೋಟಿ ರೂ. ನಷ್ಟ ಅನುಭವಿಸುತ್ತಿದೆ. ಹೀಗಾಗಿ ನಾವು ಕನಿಷ್ಠ ಪಕ್ಷ ಒಂದು ಪೈಸೆಯಾದರೂ ನೀರಿನ ದರ ಏರಿಕೆ ಮಾಡಲು ತೀರ್ಮಾನಿಸಿದ್ದೇವೆ. ಮಂಡಳಿಯ ವಿದ್ಯುತ್ ಬಿಲ್ ಸಹ ಏರಿಕೆಯಾಗುತ್ತಲೇ ಇದೆ. ಹೀಗಾಗಿ ಮಂಡಳಿಯವರು 7–8 ಪೈಸೆ ಏರಿಕೆಗೆ ಮುಂದಾಗಿದ್ದರು. ನಾನು ಸದ್ಯಕ್ಕೆ 1 ಪೈಸೆಯಷ್ಟು ಹೆಚ್ಚಳ ಮಾಡಿ ಸಾಕು ಎಂದು ಹೇಳಿದ್ದೇನೆ ಎಂದರು.

ಬೇಸಿಗೆ ಆರಂಭವಾಗುತ್ತಿದ್ದು, ಬೆಂಗಳೂರಿನ ಪೂರ್ವ ಭಾಗದಲ್ಲಿ ಕುಡಿಯುವ ನೀರಿನ ಅಭಾವದಿಂದ ಖಾಸಗಿ ಟ್ಯಾಂಕರ್ ಗಳು ದುಪ್ಪಟ್ಟು ಹಣದ ಬೇಡಿಕೆ ಇಡುತ್ತಿದ್ದು, ಜನರಿಗೆ ಉಚಿತವಾಗಿ ನೀರು ಪೂರೈಸಬೇಕು ಹಾಗೂ ಕಾವೇರಿ ಸಂಪರ್ಕ ನೀಡಿರುವ ಮನೆಗಳಿಗೆ ಶೀಘ್ರ ನೀರು ಒದಗಿಸಬೇಕು ಎಂದು ರಾಮೋಜಿ ಗೌಡ ಹೇಳಿದರು.

# ಕಂಬಿ ಮಲ್ಲಯ್ಯನ ವಿಶೇಷ ಪೂಜೆ




**ಲೋಕಾಪುರ :** ರಾಮದುರ್ಗ ತಾಲೂಕಿನ ಹುಲಕುಂದ ಗ್ರಾಮದಿಂದಕಂಬಿಮಲ್ಲಯ್ಯನನ್ನುಹೊತ್ತುಪಾದಯಾತ್ರೆಯಲ್ಲಿ ಸುಕ್ಷೇತ್ರ ಶ್ರೀಶೈಲಕ್ಕೆ ಹೊರಟಿರುವ ಭಕ್ತರನ್ನು ಸಮೀಪದ ಕಿಲ್ಲಾ ಹೊಸಕೋಟಿ ಗ್ರಾಮದಲ್ಲಿ ಅದ್ದೂರಿಯಾಗಿ ಬರಮಾಡಿಕೊಳ್ಳಲಾಯಿತು.

ನಂತರ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಕಂಬಿ ಮಲ್ಲಯ್ಯನನ್ನು ವಿಶೇಷ ಪೂಜೆ ಸಲ್ಲಿಸಲಾಯಿತು.

ಕಿಲ್ಲಾ ಹೊಸಕೋಟಿ ಗ್ರಾಮದ ಕಲಾವಿದ ನೂರಂದಪ್ಪ ಕಿಲ್ಲೇದಾರ ಅವರು ಆಗಮಿಸಿದ ಎಲ್ಲ ಭಕ್ತಾಧಿಗಳಿಗೆ ಹಾಗೂ ಗ್ರಾಮದ ಸದ್ಭಕ್ತ ಮಂಡಳಿಗೆ ಅನ್ನ ಪ್ರಸಾದ ಸೇವೆ ಏರ್ಪಡಿಸಿ ಭಕ್ತರಿಗೆ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಲಾಯಿತು.

ಗ್ರಾಮದಲ್ಲಿ ಮನೆ–ಮನೆಗೆ ತೆರಳಿ ಭಕ್ತರಿಂದ ಪೂಜೆಗೊಂಡ ಕಂಬಿ ಮಲ್ಲಯ್ಯನ ಶ್ರೀಶೈಲ ಪಾದಯಾತ್ರಾ ಭಕ್ತಾಧಿಗಳನ್ನು ಗೌರವದಿಂದ ಬಿಳ್ಕೋಡಲಾಯಿತು.

## ಹಳ್ಳೂರದಿಂದ ಶ್ರೀಶೈಲಕ್ಕೆ ಹೋಗುವ ಜೋಡು ಕಂಬಿ, ಪಾದಯಾತ್ರಿಕರಿಗೆ ಚಾಲನೆ



**ಹಳ್ಳೂರ :** ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಹಳ್ಳೂರ ದಿಂದ ಶ್ರೀಶೈಲ ಕ್ಕೆ ಹೊರಡುವ ಪಾದಯಾತ್ರೆಯು ಪ್ರಾರಂಭದಲ್ಲಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ವಿವಿಧ ವಾದ್ಯ ಮೇಳದೊಂದಿಗೆ ಜೋಡು ಕಂಬಿ ಮಲ್ಲಯ್ಯ ದೇವರನ್ನು ಕೂಡ್ರಿಸಿ ಜಂಗಮರು ಪೂಜೆ ನೆರವೇರಿಸಿ ಆರುತಿ ಮಾಡಿ ಮಂಗಳಾರುತಿ ಮಾಡಿದ ನಂತರ ಶ್ರೀ ಬಸವೇಶ್ವರ ದೇವಸ್ಥಾನದಿಂದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಆಗಮಿಸಿ ಮಂಗಳಾರುತಿ ಮಾಡಿ ಜೋಡು ಕಂಬಿ ಹೆಗಲ ಮೇಲೆ ಹೊತ್ತು ಕೊಂಡು ಶ್ರೀಶೈಲಕ್ಕೆ ಹೋಗುವ ಬಕ್ತಾದಿಗಳಿಗೆ ಗ್ರಾಮಸ್ಥರು ಶುಭ ಕೋರಿ ಬೀಳ್ಕೊಟ್ಟರು ಕಂಬಿ ಮಲ್ಲಯ್ಯನ ದರ್ಶನ ಪಡೆದುಕೊಂಡು ದೇವರ ಕೃಪೆಗೆ ಪಾತ್ರರಾದರು. ಈ ಸಮಯದಲ್ಲಿ ಪುರುಷರು, ಮಹಿಳೆಯರು, ಮುದ್ದು ಮಕ್ಕಳು ಬಾಗಿಯಾಗಿದ್ದರು, ಹಳ್ಳೂರ ದಿಂದ ಮಹಾಲಿಂಗಪೂರದವರೆಗೆ ಪಾದಯಾತ್ರೆಯಲ್ಲಿ ಸಹ ಸ್ವೋಪಾದಿಯಲ್ಲಿ ಭಕ್ತರು ಪಾಲ್ಗೊಂಡು ಕಂಬಿ ಮಲ್ಲಯ್ಯನನ್ನು ಪುರುಷರು, ಮಹಿಳೆಯರು ಹೆಗಲ ಮೇಲೆ ಹೊತ್ತು ಕ್ಕೊಂಡು ಕಂಬಿ ಮಲ್ಲಯ್ಯ ಗೇ ಪರ್ವತ ಮಲ್ಲಯ್ಯ ಗೇ ಅನ್ನುತ್ತಾ ಸಾಗುತ್ತಿದ್ದರು. ರಸ್ತೆಮದ್ಯೆ ಅಲ್ಲಲ್ಲಿ ನಾಸ್ಟಾ, ಬಾಳೆ ಹಣ್ಣು, ಕಬ್ಬಿಣ ಹಾಲು, ಟಿ ಬಿಸ್ಕಿಟ್ಟು ತಂಪಾದ ಪಾನಿಯ ವ್ಯವಸ್ಥೆಯನ್ನು ಭಕ್ತರು ಮಾಡಿದ್ದರು.

# ಭಕ್ತಿಯಿಂದ ಸೇವೆ ಮಾಡಿದರೆ ಭಗವಂತನ ಅನುಗ್ರಹ ಲಭಿಸುವುದು



**ಕಮತಗಿ :** ನಿಸ್ವಾರ್ಥ ಭಕ್ತಿ ಮತ್ತು ಸೇವೆಯಿಂದಲೇ ಭಗವಂತನ ಅನುಗ್ರಹ ಲಭಿಸುತ್ತದೆ. ಭಕ್ತರು ಹೃದಯಪೂರ್ವಕ ಸೇವೆ ಮಾಡಿದರೆ ದೇವರು ಎಲ್ಲ ರೀತಿಯ ಸಮೃದ್ಧಿಯನ್ನು ಕರುಣಿಸುತ್ತಾನೆ ಎಂದು ಕಮತಗಿಯ ಹೊಳೆ ಹುಚ್ಚೇಶ್ವರ ಸ್ವಾಮೀಜಿ ಹೇಳಿದರು.

ಶುಕ್ರವಾರ ಪಟ್ಟಣದ ಹೊರವಲಯದಲ್ಲಿರುವ ವೀರೇಶ್ವರ ಮಠದಲ್ಲಿ ಶ್ರೀಶೈಲ ಪಾದಯಾತ್ರಿಗಳಿಗೆ ಹಮ್ಮಿಕೊಂಡಿದ್ದ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಅನ್ನದಾನ ಮಹಾ ದಾನ. ಭಕ್ತರಿಗೆ ಭೋಜನ ನೀಡಿ ಅವರ ಸೇವೆ ಮಾಡುವುದು ಪರಮ ಪುಣ್ಯದ ಕಾರ್ಯ ಎಂದು ಸ್ವಾಮೀಜಿ ಹೇಳಿದರು.

ಕಮತಗಿ ಹಾಗೂ ಸುತ್ತಮುತ್ತಲಿನ ಸದ್ಭಕ್ತ ಮಂಡಳಿ ಕಳೆದ 24 ವರ್ಷಗಳಿಂದ ಶ್ರೀಶೈಲ ಪಾದಯಾತ್ರಿಗಳಿಗೆ ನಿರಂತರ ಅನ್ನದಾಸೋಹ ಆಯೋಜಿಸುತ್ತಿದ್ದು, ಇದು ಭಕ್ತರ ಒಗ್ಗಟ್ಟಿನ ಮತ್ತು ನಂಬಿಕೆಯ ಪ್ರತೀಕವಾಗಿದೆ. ಯಾತ್ರೆ ಮಾಡುವ ಭಕ್ತರು ದೈವ ಭಕ್ತಿಯಿಂದ ಕೂಡಿರುತ್ತಾರೆ. ಅವರಿಗೆ ಊಟ ಕೊಡುವ ಮೂಲಕ ನಾವು ದೈವ ಸೇವೆ ಮಾಡಿದಂತಾಗುತ್ತದೆ ಎಂದು ಸ್ವಾಮೀಜಿ ಹೇಳಿದರು.

ಕಾರ್ಯಕ್ರಮದಲ್ಲಿ ಗುಳೇಗುಡ್ಡದ ಮರಡಿ ಮಠದ ಅಭಿನವ ಕಾಡ ಸಿದ್ದೇಶ್ವರ ಸ್ವಾಮೀಜಿ, ಕಮತಗಿ ಹಾಗೂ ಸುತ್ತಮುತ್ತಲಿನ ಭಕ್ತರು ಪಾಲ್ಗೊಂಡಿದ್ದರು. ಭಕ್ತರ ಸೇವಾ ಮನೋಭಾವ ಶ್ಲಾಘನೀಯವಾಗಿದ್ದು, ಇದನ್ನು ಮುಂದುವರಿಸಲು ಎಲ್ಲರೂ ಶ್ರಮಿಸಬೇಕು ಎಂದು ಅವರು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಕಮತಗಿ ಹಾಗೂ ಸುತ್ತಮುತ್ತಲಿನ ಸದ್ಭಕ್ತ ಮಂಡಳಿಯವರು ಪಾಲ್ಗೊಂಡಿದ್ದರು.



**ಲೋಕಾಪುರ :** ಸಮೀಪದ ಕಿಲ್ಲಾ ಹೊಸಕೋಟಿ ಗ್ರಾಮದಲ್ಲಿ ಹೋಳಿ ಹಬ್ಬದ ಕಾಮದಹನ ನಿಮಿತ್ತ ಭಜನಾ ಕಲಾವಿದ ಪರಮಾನಂದ ನಾವ್ಹಿ ಹಾಗೂ ಚಿಣ್ಣರು ಹಲಗೆ ಬಾರಿಸುವ ಮೂಲಕ ಬಣ್ಣ ಎರಚಿ ಸಂಭ್ರಮದಿಂದ ಹೋಳಿ ಹಬ್ಬವನ್ನು ಆಚರಿಸಿದರು.

# ಚಿಮ್ಮಡ, ಸಂಭ್ರಮದ ಹೋಳಿ ಹಬ್ಬ: ಸುಕ್ಷೇತ್ರ ಶ್ರೀಶೈಲ ಪಾದಯಾತ್ರೆಗೆ ಚಾಲನೆ

**ಚಿಮ್ಮಡ :** ಗ್ರಾಮೀಣ ಭಾಗದಲ್ಲಿ ಹಲಿಗೆ ಹಬ್ಬವೆಂದೆ ಖ್ಯಾತಿ ಪಡೆದ ಹೋಳಿ ಹಬ್ಬವನ್ನು ಶುಕ್ರವಾರ ಸಡಗರ ಸಂಭ್ರಮದೊಂದಿಗೆ ವಿಜ್ರಂಭಣೆಯಿಂದ ಆಚರಿಸಲಾಯಿತು. ಗುರುವಾರ ಬೆಳಗ್ಗೆ 6 ಗಂಟೆಗೆ ಗ್ರಾಮ ಚಾವಡಿ ಪಕ್ಕದ ಕಾಮಣ್ಣನ ಕಟ್ಟೆ ಮೇಲೆ ರತಿ ಕಾಮರ ಮೂರ್ತಿ ಪ್ರತಿಷ್ಠಾಪಣೆ ಮಾಡಿದ ಗ್ರಾಮಸ್ಥರು ಇಡೀ ದಿನ ರೈತರು ಮಹಿಳೆಯರು ರತೀ ಕಾಮರಿಗೆ ವಿಶೇಷ ಪೂಜೆ ಸಲ್ಲಿಸಿದರು, ಸಂಜೆ ಗಣಪತಿ ಸೇವಾ ಸಮೀತಿಯಿಂದ ದೇವಸ್ಥಾನದ ಆವರಣದಲ್ಲಿ ನಾನಾ ಜನಪದ ತಂಡಗಳಿಂದ ಗೀಗಿ ಪದಗಳು, ಹೋಳಿ ಪದಗಳ ಗಾಯಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಲ್ಲದೇ ಕಾಮಣ್ಣ ಸೇವಾ ಸಮೀತಿ ನೇತ್ರತ್ವದಲ್ಲಿ ಚನ್ನಮ್ಮ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಧಿಕಾಬಾಯಿ ತೆಲಸಂಗ ಹಾಗೂ ಸುರೇಶ ಕಂಬೋಗಿಯವರ ನೇತ್ರತ್ವದಲ್ಲಿ ಹರಿದೇಶಿ ನಾಗೇಶಿಶಾವರಿಕಿಪದಗಳಗಾಯಣಕಾರ್ಯಕ್ರಮವನ್ನು ಗ್ರಾಮಸ್ಥರು ಖುಷಿಯಿಂದ ವೀಕ್ಷಿಸಿದರು.

ಮಕ್ಕಳು ಯುವಕರು ಗುಂಪಾಗಿ ಹಲಿಗೆ ಬಾರಿಸುತ್ತ ಹಲವು ಯುವಕರು ಬಣ್ಣದಾಟ ಆಡುತ್ತ ಖುಷಿ ಅನುಭವಿಸಿದರೆ. ರೈತರು, ಕಾರ್ಮಿಕರು ಹೊಸ ಬಟ್ಟೆ ತೊಟ್ಟು ಹೋಳಿ ಹಾಡುಗಳನ್ನು ಹಾಡುತ್ತಾ ಆನಂದ ಪಟ್ಟರು.

ಬುಧವಾರ ಮುಂಜಾನೆ ಗ್ರಾಮದ ಪ್ರಯುಖ ಬೀದಿಗಳಲ್ಲಿ ಸಂಗ್ರಹಿಸಲಾಗಿದ್ದ ಬ್ರಹತ್ ಪ್ರಮಾಣದ ಉರುವಲಿಗೆ ಕಿಚ್ಚು ಇಡುವ ಮೂಲಕ ನಡೆದ ರತಿ ಕಾಮರ ಪ್ರತಿಕೃತಿ ದಹನ' ಕಾರ್ಯಕ್ರಮದಲ್ಲಿ ಗ್ರಾಮಸ್ಥರಲ್ಲದೆ ನೆರೆಯ ಪಟ್ಟಣಗಳಿಂದ ನೂರಾರು ಜನರು ಗ್ರಾಮಕ್ಕೆ ಆಗಮಿಸಿ ಈ ಕಾಮದಹನದಲ್ಲಿ ಪಾಲ್ಗೊಂಡರು. ಶ್ರೀಶೈಲಕ್ಕೆ ಪಾದಯಾತ್ರೆ; ಗ್ರಾಮದಿಂದ ಸುಮಾರು ಇನ್ನೂರಕ್ಕೂ ಹೆಚ್ಚು ಜನ ಭಕ್ತಾದಿಗಳು ಗ್ರಾಮದಿಂದ ಆಂದ್ರಪ್ರದೇಶದ ಶ್ರೀಶೈಲಂ ಕ್ಷೇತ್ರಕ್ಕೆ ಪಾದಯಾತ್ರೆಯ ಮೂಲಕ ತೆರಳಿದರು. ಹೋಳಿ ಹುಣ್ಣಿಮೆಯ ರಾತ್ರಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಜಮಾವಣೆಗೊಂಡ ಭಕ್ತಾಧಿಗಳು ಶ್ರೀ ಪ್ರಭು ಮಹಾಸ್ವಾಮಿಗಳ ನೇತ್ರತ್ವದಲ್ಲಿ ವಿಶೇಷವಾದ ಕಂಬಿ (ಮಲ್ಲಯ್ಯ) ಪೂಜೆ ನೆರವೇರಿದ ನಂತರ ತೆರಳಿದರು, ಗ್ರಾಮಸ್ಥರು ಪಾದಯಾತ್ರಿಗಳಿಗೆ ಹಣ್ಣು, ನೀರು, ಅಲ್ಪೋಪಹಾರ ವಿತರಿಸುವ ಮೂಲಕ ತಮ್ಮ ಭಕ್ತಿಸೇವೆ ಸಲ್ಲಿಸಿದರು.




# ಶ್ರೀಶೈಲಕ್ಕೆ ಪಾದಯಾತ್ರೆ ಬೆಳೆಸಿದ ಭಕ್ತಾಧಿಗಳು ಗಿರಿ ಗಿರಿ ಪರ್ವತಗಿರಿ ಮಲ್ಲಯ್ಯ ಘೇ...



**ತೇರದಾಳ :** ಯುಗಾದಿ ಹಬ್ಬದಂದು ಜರಗುವ ಆಂಧ್ರಪ್ರದೇಶದ ಶ್ರೀಶೈಲ ಮಲ್ಲಿಕಾರ್ಜುನ ರಥೋತ್ಸವ ಹಾಗೂ ಜಾತ್ರೆಯಲ್ಲಿ ಪಾಲ್ಗೊಳ್ಳಲು ತೇರದಾಳ ಹಾಗೂ ಸುತ್ತಮುತ್ತಲ್ಲಿನ ಸಾವಿರಾರು ಭಕ್ತಾಧಿಗಳು ಹೋಳಿ ಹುಣ್ಣೆಮೆಯಂದು ಗುರುವಾರ ಪಾದಯಾತ್ರೆ ಮೂಲಕ ತೆರಳಿದರು.

ಪಾದಯಾತ್ರೆ ಪ್ರಾರಂಭಿಸುವ ಮೊದಲು ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ದೇವಸ್ಥಾನದಲ್ಲಿ ಮಲ್ಲಯ್ಯನ ಕಂಬಿಗೆ ಸಾಮೂಹಿಕವಾಗಿ ಮಂಗಳಾರುತಿ ಜರುಗಿತು. ನೆತ್ತಿ ಸುಡುವ ಬಿಸಿಲಿನಲ್ಲಿ ಮಂಗಳಾರುತಿಗೆ ಬರಗಾಲಿನಲ್ಲಿಯೇ ನಿಂತಿದ್ದ ಭಕ್ತರು ಭಕ್ತಿಯ ಪರಾಕಷ್ಠೆಗೆ ಸಾಕ್ಷಿಯಾದರು. ಮಂಗಳಾರುತಿ ಮುಗಿಯುತ್ತಿದ್ದಂತೆ ಗಿರಿ ಗಿರಿ ಪರ್ವತಗಿರಿ ಮಲ್ಲಯ್ಯ ಘೇ....ಎಂದು ಘೋಷಣೆಗಳನ್ನು ಕೂಗುತ್ತ ಶ್ರೀಶೈಲಕ್ಕೆ ಪಾದಯಾತ್ರೆ ಬೆಳೆಸಿದರು. ಯಾತ್ರಿಕರ ಕಾಲಿಗೆ ಭಕ್ತರು ನಮಸ್ಕರಿಸಿ ಶುಭ ಹಾರೈಸಿದರು.

ಏತನ್ಮಧ್ಯೆ ದಾರಿಯುದ್ಧಕ್ಕೂ ಯಾತ್ರಿಕರಿಗೆ ತಂಪು ಪಾನೀಯ, ದ್ರಾಕ್ಷೀ, ಬಾಳೆಹಣ್ಣು, ಕಲ್ಲಂಗಡಿ ನಾನಾ ತರಹದ ವ್ಯವಸ್ಥೆಯನ್ನು ಮಾಡಿದ್ದರು. ಹದಿನೈದು ದಿನಗಳ ವರೆಗೆ ತೆರಳುವ ಪಾದಯಾತ್ರಿಗಳನ್ನು ಬೀಳ್ಕೊಡಲು ಸಂಬಂಧಿಕರು, ಸ್ನೇಹಿತರು, ಕುಟುಂಬದವರು ನೆರೆಯ ಬನಹಟ್ಟಿ ವರೆಗೆ ಸಾಥ್ ನೀಡಿ ಮರಳಿ ಬಂದರು. ಇನ್ನೂ ಯಾತ್ರಿಗಳು ಪಾದಯಾತ್ರೆ ಬೆಳೆಸುವ ಮುನ್ನಾದಿನ ಬ್ಯಾಗ್, ಒಳಉಡುಪುಗಳು, ಪಾದರಕ್ಷೆ, ಔಷಧಿ, ಎಣ್ಣೆ, ಬ್ರಷ್, ಪೇಸ್ಟ್ ಖರೀದಿಯಲ್ಲಿ ತೊಡಗಿದ್ದರಿಂದ ಮಾರುಕಟ್ಟೆ ಗಿಜಿ–ಗಿಜಿಯಿಂದ ಕೂಡಿತ್ತು.

## ಶ್ರೀಶೈಲಕ್ಕೆಹೊರಟಮಲ್ಲಯ್ಯನಕಂಬಿಗಳು:ಮಾ.30ರಂದುಶ್ರೀಶೈಲದಲ್ಲಿಯುಗಾದಿ



**ರಬಕವಿ–ಬನಹಟ್ಟಿ :** ಮಾ14 ಉತ್ತರ ಕರ್ನಾಟಕದ ಲಕ್ಷಾಂತರ ಭಕ್ತರು ಆಂಧ್ರದ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಯುಗಾದಿ ಪ್ರಯುಕ್ತ ತೆರಳುವದು ಸಾಮಾನ್ಯ. ಅದರಂತೆ ಪ್ರಸಕ್ತ ವರ್ಷ ಮಾ.30 ರಂದು ಸುಕ್ಷೇತ್ರ ಶ್ರೀಶೈಲದಲ್ಲಿ ಯುಗಾದಿ ಆಚರಣೆ ನಡೆಯಲಿದೆ ಎಂದು ಶ್ರೀಶೈಲ ದೇವಸ್ಥಾನ ಟ್ರಸ್ಟ್‌ನ ಕಾರ್ಯನಿರ್ವಹಣಾಧಿಕಾರಿ ಎಂ. ಶ್ರೀನಿವಾಸರಾವ್ ತಿಳಿಸಿದ್ದಾರೆ.

ಸ್ಪರ್ಶಲಿಂಗವಿಲ್ಲ: ಯುಗಾದಿ ಪ್ರಯುಕ್ತ ಲಕ್ಷಾಂತರ ಭಕ್ತರು ಮಲ್ಲಯ್ಯನ ದರ್ಶನಕ್ಕಾಗಿ ಕಾಯ್ದು ಸುಸ್ತಾಗುತ್ತಿರುವ ಹಿನ್ನಲೆ ಈ ವರ್ಷ ಮಾ.27 ರಿಂದ 30 ರವರೆಗೆ ಸುಕ್ಷೇತ್ರ ಶ್ರೀಶೈಲದ ಮಲ್ಲಿಕಾರ್ಜುನ ದೇವರ ಲಿಂಗಕ್ಕೆ ಜನತೆಗೆ ಸ್ಪರ್ಶಲಿಂಗ ದರ್ಶನವನ್ನು ನಿಷೇಧಿಸಲಾಗಿದೆ ಎಂದು ಸಮಿತಿ ತಿಳಿಸಿದೆ.

ಶ್ರೀಶೈಲದತ್ತ ಮಲ್ಲಯ್ಯನ ಕಂಬಿಗಳು: ನಗರದ ಸೋಮವಾರ ಪೇಟ ದೈವ ಮಂಡಳಿ ಹಾಗು ಸೋಮವಾರ ಸಮಸ್ತ ದೈವ ಮಂಡಳಿಯ ಮಲ್ಲಯ್ಯನ ಕಂಬಿಗಳು ಹೋಳಿ ದಿನ ರವಿವಾರ ತಡರಾತ್ರಿಯಂದು ಗಾಂಧಿ ವೃತ್ತದ ಬಳಿ ನಗರ ಹೊರವಲಯದಲ್ಲಿ ಮಂಗಳಾರುತಿಯೊಂದಿಗೆ ದೂರದ ಆಂಧ್ರದ ಸುಕ್ಷೇತ್ರ ಶ್ರೀಶೈಲಕ್ಕೆ ಪಾದಯಾತ್ರೆ ಮೂಲಕ ನೂರಾರು ಸೇವಕರೊಂದಿಗೆ ತೆರಳಿದವು.

ಸುಮಾರು 14 ದಿನಗಳ ಕಾಲ ಪಾದಯಾತ್ರೆ ಮೂಲಕ ತೆರಳಿ ಮಾ.30 ರಂದು ನಡೆಯಲಿರುವ ಯುಗಾದಿ ಹಬ್ಬದ ನಿಮಿತ್ಯ ಜಾತ್ರೆಗೆ ಭಕ್ತರು ತೆರಳಿದರು. ಪಾದಯಾತ್ರೆಯ ನೇತೃತ್ವವನ್ನು ರಾಚಯ್ಯಾಸ್ವಾಮಿ ಮಠಪತಿ, ಚನ್ನಬಸಯ್ಯಸ್ವಾಮಿ ವಹಿಸಿದ್ದರು. ಮಹತ್ವದ್ದಾಗಿ ಶ್ರೀಶೈಲ ಮಲ್ಲಿಕಾರ್ಜುನ ದೇವರಿಗೆ ಯಾವದೇ ಜಾತಿಯ ಮಿತಿಯಿಲ್ಲವೆಂಬುದಕ್ಕೆ ಮತ್ತೊಮ್ಮೆ ಸಾಕ್ಷಿಯಾಗಿ ಹಲವಾರು ಮುಸ್ಲಿಂ ಸಮುದಾಯ ಬಾಂಧವರು ದೂರದ 600 ಕಿ.ಮೀ.ನಷ್ಟು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಸಾವಿರಾರು ಮಲ್ಲಯ್ಯನ ಭಕ್ತರು ಹೋಳಿ ಹುಣ್ಣಿಮೆಯದಿನರಾತ್ರಿ9ಗಂಟೆಗೆಪಾದಯಾತ್ರೆಗೆ ಬೆಳ್ಳಿಕಂಬಿಗಳೊಂದಿಗೆ ಚಾಲನೆ ನೀಡಲಾಯಿತು. ಮುಧೋಳ–ಕಲಾದಗಿ–ಬಾಗಲಕೋಟ–ಶಿರೂರ–ಹುನಗುಂದ–ಮುದಗಲ್ಲ–ಪನ್ನೂರ–ಕೊಲಂಪೇಠ–ದಡ್ಡಿಬೆಳಗಲ್–ಮಂತ್ರಾಲಂಯು–ಕರ್ನೂಲ್–ನಂದಿ ಕೊಟ್ಟೂರ–ನಾಗಲೋಟಿ–ಗಂಗನಪಳ್ಳಿಯಿಂದ ಸುಕ್ಷೇತ್ರ ಶ್ರೀಶೈಲಕ್ಕೆ ತೆರಳಲಿದ್ದಾರೆ.

# ಹೋಳಿ ರಂಗೋತ್ಸವದಲ್ಲಿ ಮಿಂದೆದ್ದ ಅವಳಿ ನಗರದ ಜನತೆ

# ಕೆಟ್ಟದ್ದನ್ನು ಸುಟ್ಟು ಹಾಕುವುದೇ ಹೋಳಿ ಹಬ್ಬದ ಸಂಕೇತ: ರಾಮಣ್ಣಾ ಹುಲಕುಂದ






**ಶಿವಾನಂದ ಪಿ.ಮಹಾಬಲಶೆಟ್ಟಿ**

**ರಬಕವಿ–ಬನಹಟ್ಟಿ :** ರಬಕವಿ–ಬನಹಟ್ಟಿ ಅವಳಿ ನಗರಗಳಲ್ಲಿ ಹೋಳಿ ಹಬ್ಬದ ಸಂಭ್ರಮ ಜೋರಾಗೇ ಇರುತ್ತದೆಯಾದರೂ ಈ ಬಾರಿ ರಬಕವಿ ನಗರದ ಶಂಕರಲಿಂಗ ಸರ್ಕಲ್ ಬಳಿ ಹಾಕಿದ್ದ ಭವ್ಯ ವೇದಿಕೆಯ ಎಡ ಭಾಗದಲ್ಲಿ ಪುರುಷರಿಗೆ ಮತ್ತು ಬಲಬದಿಯಲ್ಲಿ ಮಹಿಳೆಯರಿಗೆ ಬಣ್ಣವಾಡಲು ಪ್ರತ್ಯೇಕ ಸ್ಥಳಾವಕಾಶ ನಿಗದಿ ಮಾಡಿ ರಬಕವಿ ಸಮಸ್ತ ನಾಗರಿಕರ ಬಳಗ ಆಯೋಜಿಸಿದ್ದ ರಂಗೋತ್ಸವ ಸಮಾರಂಭ ವಿನೂತನವಾಗಿತ್ತು ಮತ್ತು ಭಾರೀ ಜನಮೆಚ್ಚುಗೆ ಪಡೆದು ಯಶಸ್ವಿಯಾಯಿತು.

ರಿಬ್ಬನ್ ಕಟ್ ಮಾಡಿ ಮಾತನಾಡಿದ ಹಿರಿಯ ರಾಮಣ್ಣಾ ಹುಲಕುಂದ ಹೋಳಿಯಲ್ಲಿ ಕಾಮಣ್ಣನ ದಹಿಸಲು ಪೌರಾಣಿಕ ಕಥೆಯಿದ್ದರೂ ಅದರ ಸಂದೇಶವು ನಮ್ಮೊಳಗಿನ ಕೆಟ್ಟದ್ದನ್ನು ದಹಿಸುವುದೇ ಆಗಿದೆ. ನಾವು ಕೂಡ ನಮ್ಮ ದುರ್ಗುಣಗಳನ್ನು, ಕೋಪ, ತಾಪ, ಈರ್ಷ್ಯಾಸೂಯೆಗಳನ್ನು ಸುಟ್ಟು ಹಾಕುವ ಮೂಲಕ ಸಮಾಜದ ಚೌಕಟ್ಟಿನಲ್ಲಿ ಶುದ್ಧ ಜೀವನ ನಡೆಸುವುದೇ ಮುಖ್ಯವೆಂದರು.

ಸಮಾರಂಭವನ್ನು ಸಮಸ್ತ ದೈವಮಂಡಳದ ಹಿರಿಯರಾದ ರಾಮಣ್ಣಾ ಹುಲಕುಂದ, ಧರೆಪ್ಪ ಉಳ್ಳಾಗಡ್ಡಿ, ಈಶ್ವರ ನಾಗರಾಳ, ರವಿ ಮುತ್ತೂರ, ಮಾರುತಿ ನಾಯಕ, ಮಹಾದೇವ ದುಪದಾಳ, ಗುರುಪಾದಯ್ಯಾ ಅಮ್ಮಣಗಿಮಠ ಮುಂತಾದವರು ರಿಬ್ಬನ್ ಕಟ್ ಮಾಡುವ ಮೂಲಕ ಚಾಲನೆ ನೀಡಿದರು.

ಹೋಳಿಹಬ್ಬವನ್ನು ತಮ್ಮ ಗಲ್ಲಿಗಳಲ್ಲಿ ಮಾತ್ರ ಆಚರಿಸುತ್ತಿದ್ದ ಮಹಿಳೆಯರು ಈ ಬಾರಿ ಪ್ರತ್ಯೇಕ ಸ್ಥಳ ಮತ್ತು ಕಟ್ಟುನಿಟ್ಟಾದ ಬಂದೋಬಸ್ತ್ ಮಾಡಿದ್ದರಿಂದ ಸಹಸ್ರ ಸಂಖ್ಯೆಗಳಲ್ಲಿ ಪಾಲ್ಗೊಂಡು ಡಿಜೆ ಸೌಂಡ್‌ಗೆ ಅದ್ದೂರಿ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು. ವೇದಿಕೆ ಬಲಭಾಗದಲ್ಲಿ ಪುರುಷರಿಗೆ ಮೀಸಲಿದ್ದ ಸ್ಥಳದಲ್ಲಿ ಯುವಕರು, ಬಾಲಕರು, ವೃದ್ಧರು ಎನ್ನದೇ ಎಲ್ಲ ವಯೋಮಾನದವರು ಡಿಜೆ ಸೌಂಡ್‌ಗೆ ಕುಣಿದುಕುಪ್ಪಳಿಸಿ ಕೇಕೆ ಹಾಕಿದರು. ಆಯೋಜಕರು ಮಹಿಳೆಯರಿಗೆ ಎರಡೂವರೆ ಸಾವಿರ ಮಜ್ಜಿಗೆ ಪಾಕೇಟ್ ವಿತರಿಸಿದರು. ಯುವಕರಿಗೆ ಮಜ್ಜಿಗೆ ಅಗತ್ಯವಿರಲಿಲ್ಲ.

ಬಣ್ಣದಾಟದಲ್ಲಿ ಬಸವರಾಜ ತೆಗ್ಗಿ, ಡಾ.ರವಿ ಜಮಖಂಡಿ, ಸಂಜಯ ತೇಲಿ, ರವಿ ಗಡಾದ, ಪ್ರವೀಣ ಹಜಾರೆ, ಪ್ರಭಾಕರ ಡಪಳಾಪೂರ, ಮಲ್ಲಿಕಾರ್ಜುನ ಗಡೆನ್ನವರ, ಪ್ರಭು ಪೂಜಾರಿ, ಯಲ್ಲಪ್ಪ ಕಟಗಿ, ಸಂಜಯ ಮುತ್ತೂರ ಸೇರಿದಂತೆ ಪ್ರಮುಖರು ಭಾಗಿಯಾಗಿದ್ದರು.

ಯಾವುದೇ ಅಹಿತಕರ ಘಟನೆ ಜರುಗದಂತೆ ಎಎಸ್ಸೈ ಕರಣ ರಜಪೂತ ಮತ್ತವರ ಸಿಬ್ಬಂದಿ ಬಿಗಿ ಬಂದೋಬಸ್ತ ನೀಡಿದ್ದರು. ಎಲ್ಲ ಸಮಾಜಗಳ ಯುವಕರು ಅಚ್ಚುಕಟ್ಟಾಗಿ ಸಮಾರಂಭ ನಡೆಯಲು ಶ್ರಮಿಸಿದರು.

**ಹರಿಜನ ಕೇರಿಯಲ್ಲಿ ಬಣ್ಣದೋಕುಳಿ :** ರಬಕವಿಯ ಹರಿಜನ ಗಲ್ಲಿಯಲ್ಲೂ ಶೇಖರ ಹಳಿಂಗಳಿ ನೇತೃತ್ವದ ಯುವಕರ ಸಂಘ ಹೋಳಿ ನಿಮಿತ್ಯ ಡಿಜೆ ಸೌಂಡ್ ಬಳಸಿ ಬಣ್ಣದಾಟ ಆಯೋಜಿಸಿತ್ತು.

ಹರಿಜನ, ಸಿಕ್ಕಲಗಾರ ಸಮಾಜದ ಯುವಕರು ಸೌಂಡ್‌ಗೆ ಕುಣಿದು ಹರ್ಷದಿಂದ ಬಣ್ಣದಾಟವಾಡಿದರು.

**ಬನಹಟ್ಟಿಯಲ್ಲೂ ಹೋಳಿ ಸಂಭ್ರಮ :** ಬನಹಟ್ಟಿ ನಗರದ ಈಶ್ವರಲಿಂಗ ಮೈದಾನದಲ್ಲಿ ಮೀನಾಕ್ಷಿ ಸವದಿ ನೇತೃತ್ವದಲ್ಲಿ ವನಿತೆಯರು ಬಣ್ಣದಾಟವಾಡಿದರು.

ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಮಹಿಳೆಯರು ಎಲ್ಲೆಡೆ ವನಿತೆಯರಿಗೆ ಬಣ್ಣ ಹಾಕಿ ಸಂಭ್ರಮಿಸಿದರು.

ಡಾ.ಪ್ರಭು ಪಾಟೀಲ, ಶ್ರೀಶೈಲ ದಬಾಡಿ, ಬಸವಂತಪ್ಪ ಜಾಡಗೌಡ, ಮಲ್ಲಿಕಾರ್ಜುನ ತುಂಗಳ, ರವಿ ಕರ್ಲಟ್ಟಿ, ಮಲ್ಲಿಕಾರ್ಜುನ ಬಾಣಕಾರ, ಪ್ರವೀಣ ದಬಾಡಿ, ಈರಣ್ಣಾ ಹೊನವಾಡ ಸೇರಿದಂತೆ ಪ್ರಮುಖರು ಬಣ್ಣದಾಟವಾಡಿ ಸಂಭ್ರಮಿಸಿದರು.

ಹೋಳಿ ಹಬ್ಬದ ಸಂಭ್ರಮಾಚರಣೆ ರಬಕವಿ–ಬನಹಟ್ಟಿ,

ರಾಮಪುರ, ಹೊಸೂರ ಸೇರಿದಂತೆ ತಾಲೂಕಿನ ಗ್ರಾಮೀಣ ಭಾಗಗಳಲ್ಲೂ ಸಡಗರದಿಂದ ಜರುಗಿತು.

# ಪ್ರತಿಭಾ ಪುರಸ್ಕಾರ ಸಮಾರಂಭ: ಛಲವಿದ್ದರೆ ಮಾತ್ರ ಸಾಧನೆ ಸಾಧ್ಯ




**ಹುಬ್ಬಳ್ಳಿ :** ಹಳೆ ಹುಬ್ಬಳ್ಳಿಯ ಕಾರವಾರ ರಸ್ತೆಯಲ್ಲಿರುವ ಪ್ರಕಾಶ ಟ್ಯುಟೋರಿಯಲ್ಸ್‌ನ ಆವರಣದಲ್ಲಿ 2023-24 ನೆ ಸಾಲಿನಲ್ಲಿ ಎಸ್.ಎಸ್.ಎಲ್. ಸಿ. ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮಅಂಕಪಡೆದವಿದ್ಯಾರ್ಥಿಗಳಿಗೆಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಮ.ನಿ.ಪ್ರ. ಅಭಿನವ ರೇವಣಸಿದ್ಧ ಮಹಾಸ್ವಾಮಿಗಳು ರಾಯನಾಳ ಇವರು ವಹಿಸಿದ್ದರು. ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, "ಸಾಧನೆಯ ಹಾದಿ ಸುಗಮವಲ್ಲ. ಛಲವಿದ್ದರೆ ಮಾತ್ರ ಆ ಹಾದಿಯಲ್ಲಿ ಸಾಗಲು ಸಾಧ್ಯ. ನಮ್ಮ ಕ್ರಿಯೆಗಳಿಗೆ ಪೂರಕ ಪ್ರತಿಕ್ರಿಯೆಗಳು ಇರುತ್ತವೆ. ಅದೇ ರೀತಿ ನಾವು ಆಪೇಕ್ಷೆ ಪಟ್ಟ ಫಲಿತಾಂಶ ಪಡೆಯಲು ಸಾಧನೆಯ ಹಾದಿಯಲ್ಲಿ ವೇಗವಾಗಿ ಸಾಗಬೇಕು" ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಹುಬ್ಬಳ್ಳಿ ಧಾರವಾಡ ಉಪ ಪೊಲೀಸ್ ಆಯುಕ್ತರಾದ ಡಿ.ಸಿ.ಪಿ. ರವೀಶರವರು "ಮಾಡುವ ಕೆಲಸದಲ್ಲಿ ಶ್ರದ್ಧೆ, ನಿಷ್ಠೆ ಮತ್ತು ನೈತಿಕ ಮೌಲ್ಯ ಇರಬೇಕು. ನಿರಂತರ ಪ್ರಯತ್ನದಿಂದ ಮಾತ್ರ ಯಶಸ್ಸು ಸಿಗಬಲ್ಲದು. ಅದರ ಜೊತೆಗೆ ಜೀವನದ ಸವಾಲುಗಳನ್ನು ಎದುರಿಸುವ ಶಕ್ತಿ ಬೆಳೆಸಿಕೊಳ್ಳಬೇಕು. ನಮ್ಮ ಸಾಧನೆ ಮುಂದಿನ ಜನಾಂಗಕ್ಕೆ ಪ್ರೇರಣೆ ಯಾಗಬೇಕು" ಎಂದರಲ್ಲದೆ,

"ಪ್ರತಿಭಾ ಪುರಸ್ಕಾರಗಳು ವಿದ್ಯಾರ್ಥಿಗಳ ಜವಾಬ್ದಾರಿಗಳನ್ನುಮತ್ತಷ್ಟುಹೆಚ್ಚಿಸುತ್ತವೆ.ಇತರೆ ವಿದ್ಯಾರ್ಥಿಗಳಿಗೆ ಇದು ಪ್ರೇರಣೆಯಾಗುತ್ತದೆ." ಎಂದರು. ಮುಖ್ಯ ಅತಿಥಿಗಳಾಗಿ ಅಗಮಿಸಿದ ಹಳೆ ಹುಬ್ಬಳ್ಳಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಎಮ್.ಎನ್.ಸಿಂಧೂರ ಮಾತನಾಡಿ, "ಗೆಲುವಿಗೆ ಪ್ರತಿಭೆ ಬೇಕು ಆದರೆ ಗೆಲುವನ್ನು ಪುನರಾವರ್ತಿಸಲು ವ್ಯಕ್ತಿತ್ವ ಬೇಕು" ಎಂದರು. ಇದೇ ಸಂದರ್ಭದಲ್ಲಿ ಶೇ. 85 ಕ್ಕೂ ಹೆಚ್ಚು ಅಂಕಗಳನ್ನು ಪಡೆದ 35 ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಟ್ಯುಟೋರಿಯಲ್ಸ್ ಗೆ ಪ್ರಥಮ ಸ್ಥಾನವನ್ನು ಪಡೆದ ಕು.ಹರ್ಷಿತಾ ಚಿಕ್ಕಣ್ಣವರ, ದ್ವಿತೀಯ ಸ್ಥಾನ ಪಡೆದ ಕು. ಧರತಿ ಧೋಂಗಡಿ ಮತ್ತು ತೃತೀಯ ಸ್ಥಾನ ಪಡೆದ ಕು. ಚೇತನಾಕರಡಿಗುಡ್ಡಇವರಿಗೆನಗದುಬಹುಮಾನ ನೀಡಿ ಸನ್ಮಾನಿಸಲಾಯಿತು. ಇದೆ ಸಂದರ್ಭದಲ್ಲಿ ಎಸ್.ವಿ.ಜೆ. ಶಾಲೆಯ ಮಕ್ಕಳಿಂದ ನೃತ್ಯ ಹಾಗೂ ವಿವಿಧ ಮನರಂಜನಾ ಕಾರ್ಯಕ್ರಮಗಳು ಪ್ರದರ್ಶಿಸಲ್ಪಟ್ಟವು. ಪ್ರಾರಂಭದಲ್ಲಿ ಕು. ಪ್ರೀತಮ ಗೌಡರ ಸ್ವಾಗತಿಸಿದರು. ಟ್ಯುಟೋರಿಯಲ್ಸ್‌ನ ಪ್ರಾಚಾರ್ಯ ನಂದಕುಮಾರ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಅತಿಥಿಗಳಾಗಿ; ಹನುಮಂತಪ್ಪ ಬಂಕಾಪೂರ, ಅಬಿದ ಜೋಡಗೇರಿ, ಎಸ್.ಬಿ.ನಾಯಕ, ಸಚಿನ ಪಾಟೀಲ, ಶ್ರೀ ಶಿವಾನಂದ ಜವಳಿ, ಆರ್. ಎಚ್. ತಳವಾರ, ಶ್ರೀನಿವಾಸ ಕುದರಿ , ಮಂಜುನಾಥ ದೊಡ್ಡಮನಿ, ಜಗದೀಶ್ ಚಿಕ್ಕಣ್ಣವರ, ಶ್ರೀಮತಿ ಭುವನೇಶ್ವರಿ ಸೇರಿದಂತೆ ನೂರಾರು ಪಾಲಕರು ಭಾಗವಹಿಸಿದ್ದರು. ಶ್ರೀಮತಿ ಸುರೇಖಾ ಸವಣೂರ ನಿರೂಪಿಸಿದರು. ಕು. ಸೋನಿಯಾ ಪೂಜಾರಿ ವಂದಿಸಿದರು.

# ಎಸ್ ಎಸ್ ಎಲ್ ಸಿ ಪರೀಕ್ಷಾ ಪೂರ್ವ ಸಿದ್ಧತಾ ಸಭೆ

**ಲಕ್ಷ್ಮೇಶ್ವರ :** ಇದೇ ಮಾರ್ಚ್ 21ರಿಂದ ಆರಂಭವಾಗಲಿರುವ ಎಸ್ ಎಸ್ ಎಲ್ ಸಿ ಪರೀಕ್ಷಾ ಪೂರ್ವ ಸಿದ್ಧತಾ ಸಭೆ ತಹಶೀಲ್ದಾರ್ ವಾಸುದೇವ್ ವಿ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರರಕಾರ್ಯಾಲಯದಲ್ಲಿಜರುಗಿತು. ಸಭೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಧರ್ಮರ ಕೃಷ್ಣಪ್ಪ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್ ಎನ್ ನಾಯಕ್ ಹೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರಾದ ಅಂಜನಪ್ಪ ವಾಯುವ ಕರ್ನಾಟಕ ಸಾರಿಗೆ ಸಂಸ್ಥೆಯ ಘಟಕ ವ್ಯವಸ್ಥಾಪಕರಾದ ಸವಿತಾ ಆದಿ ಆರೋಗ್ಯ ಇಲಾಖೆಯ ಅಧಿಕಾರಿಗಳು ಸೇರಿದಂತೆ ಎಲ್ಲ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಸಭೆಯಲ್ಲಿ ಶಿಕ್ಷಣ ಸಂಯೋಜಕರಾದ ಉಮೇಶ್ ಹುಚ್ಚಯ್ಯನ ಮಠ ಅವರು ಸಭೆಗೆ ಪರೀಕ್ಷಾಪೂರ್ವದ ಸಿದ್ಧತಾ ವಿವರಗಳನ್ನು ತಿಳಿಸಿದರು.

ತಾಲೂಕಿನಲ್ಲಿ ಒಟ್ಟು 14 ಸರ್ಕಾರಿ ಶಾಲೆಗಳು 8 ಅನುದಾನಿತ ಪ್ರೌಢಶಾಲೆಗಳು 11 ಅನುದಾನ ರಹಿತ ಪ್ರೌಢಶಾಲೆಗಳು ಒಟ್ಟು 33 ಶಾಲೆಗಳು ಲಕ್ಷ್ಮೇಶ್ವರ ತಾಲೂಕಿನಲ್ಲಿ ಇದ್ದು ಒಟ್ಟು 1630 ವಿದ್ಯಾರ್ಥಿಗಳು ಪ್ರಸಕ್ತ ಪರೀಕ್ಷೆಗೆ ಹಾಜರಾಗಲಿದ್ದಾರೆ ಎಂದರು ಒಟ್ಟು 1630 ವಿದ್ಯಾರ್ಥಿಗಳಲ್ಲಿ 807 ವಿದ್ಯಾರ್ಥಿಗಳು 823 ವಿದ್ಯಾರ್ಥಿನಿಯರು ಪರೀಕ್ಷೆಗೆ ಹಾಜರಾಗಲಿದ್ದಾರೆ ಎಂದು ಹೇಳಿದವರು ಪರೀಕ್ಷೆಗೆ ಸಂಬಂಧಪಟ್ಟಂತೆ ಮಾಧ್ಯಮದ ವಿಷಯವಾಗಿ ಕನ್ನಡ ಮಾಧ್ಯಮದಲ್ಲಿ 1126 ವಿದ್ಯಾರ್ಥಿಗಳು ಆಂಗ್ಲ ಮಾಧ್ಯಮ 435 ವಿದ್ಯಾರ್ಥಿಗಳು ಉರ್ದು ಮಾಧ್ಯಮದಲ್ಲಿ 69 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು.

ಪರೀಕ್ಷೆಗೆ ಸಂಬಂಧಪಟ್ಟಂತೆ ಒಟ್ಟು ಲಕ್ಷ್ಮೇಶ್ವರ ತಾಲೂಕಿನಲ್ಲಿ ಬರುವ ಆರು ಪರೀಕ್ಷಾ ಕೇಂದ್ರಗಳಲ್ಲಿ ಮೂರು ಪರೀಕ್ಷಾ ಕೇಂದ್ರಗಳು ಲಕ್ಷ್ಮೇಶ್ವರದಲ್ಲಿದ್ದು ಇನ್ನೂ ಮೂರು ಗ್ರಾಮೀಣ ಪ್ರದೇಶಗಳಾದಪು. ಬಡ್ನಿ ಮತ್ತು ಸಿಗಲಿ ಪರೀಕ್ಷಾ ಕೇಂದ್ರಗಳಾಗಿವೆ ಈ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಅಧೀಕ್ಷಕರು ಕಸ್ಟೋಡಿಯನ್ನ ಸೇರಿದಂತೆ ಒಟ್ಟು 166 ಸಿಬ್ಬಂದಿಗಳನ್ನು ಈಗಾಗಲೇ ನೇಮಕ ಮಾಡಲಾಗಿದೆ. ಸಭೆಯಲ್ಲಿ ಮಾತನಾಡಿದ ಕಾರ್ಯನಿರ್ವಾಹಕ ಅಧಿಕಾರಿ ಧರ್ಮ ಕೃಷ್ಣಪ್ಪ ಅವರು ತಾಲೂಕಾ ಆಡಳಿತ ಪರೀಕ್ಷೆಯನ್ನು ಸಂಪೂರ್ಣವಾಗಿ ಯಶಸ್ಸು ಗಳಿಸಲು ಎಲ್ಲ ಸಹಕಾರ ನೀಡಲಿದೆ ನಕಲು ರಹಿತ ಮತ್ತು ಎಲ್ಲಿಯೂ ಲೋಪದೋಷಗಳು ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಚ್ ಎನ್. ನಾಯಕ ಅವರು ಪ್ರಸಕ್ತ ಎಸ್ ಎಸ್ ಎಲ್ ಸಿ ಪರೀಕ್ಷೆಗಾಗಿ ಇಡೀ ತಾಲೂಕಿನಾದ್ಯಂತ ಶಿಕ್ಷಕ ಸಮುದಾಯ ಅತ್ಯಂತ ಕಾಳಜಿಯಿಂದ ವಿದ್ಯಾರ್ಥಿಗಳ ಮೇಲೆ ವೈಯಕ್ತಿಕ ನಿಗಾ ಇಟ್ಟು ಪರೀಕ್ಷೆಗೆ ಸಿದ್ಧತೆ ಮಾಡಿಕೊಂಡಿದ್ದು ಕಲಿಕೆಯಿಂದ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಮನೆ ಪಾಠ ಹಾಗೂ ಬೆಳಗಿನ ಜಾವ ಐದು ಗಂಟೆಗೆ ವಿದ್ಯಾರ್ಥಿಗಳನ್ನು ಎಚ್ಚರಗೊಳಿಸಿ ಅಭ್ಯಾಸಕ್ಕೆಸಿದ್ಧಗೊಳಿಸುವುದುಸೇರಿದಂತೆಎಲ್ಲಾ ಕ್ರಮಗಳನ್ನುಕೈಗೊಂಡಿದ್ದು ಈ ಬಾರಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನಪಡೆಯಬೇಕೆಂಬ ಹಂಬಲದಿಂದ ಸಾಕಷ್ಟು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ತಹಸಿಲ್ದಾರ್ ವಾಸುದೇವ್ ವಿ ಸ್ವಾಮಿಯವರು ಎಲ್ಲ ಇಲಾಖೆಗಳ ಸಹಕಾರವಿದ್ದು ಅತ್ಯುತ್ತಮ ಗುಣಮಟ್ಟದಲ್ಲಿ ಪರೀಕ್ಷೆಗಳನ್ನುಸಂಘಟಿಸಿತಾಲೂಕಿನ್ನುಹೆಸರನ್ನು ರಾಜ್ಯಮಟ್ಟದಲ್ಲಿ ಬರುವಂತೆ ಮಾಡುವುದು ಎಲ್ಲ ಇಲಾಖೆಗಳ ಜವಾಬ್ದಾರಿಯಾಗಿದೆ ಆದ್ದರಿಂದ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ನೇಮಕಗೊಂಡ ಎಲ್ಲಾ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಮಹಿಳೆ ಎಲ್ಲಾ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾಳೆ: ಶ್ರೀಮತಿ ಜಯಶ್ರೀ ಕಾರೇಕರ



**ಧಾರವಾಡ:** ನೂರಾರು ವರ್ಷದ ಹಿಂದೆ ಮಹಿಳೆ ನಾಲ್ಕು ಗೋಡೆಗಳ ಮಧ್ಯೆ ಬದುಕಬೇಕೆನ್ನುವ ರೀತಿ ಇತ್ತು ಆದರೆ ಅದು ಅನೇಕ ಮಹಾತ್ಮರ ಹೋರಾಟದ ಫಲವಾಗಿ ಮಹಿಳೆ ಇಂದು ಎಲ್ಲಾ ಕ್ಷೇತ್ರದಲ್ಲಿ ಮುನ್ನುಗ್ಗಿ ಸಾಧನೆ ಮಾಡುತ್ತಿದ್ದಾಳೆ ಎಂದು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಉಪನಿರ್ದೇಶಕಿ (ಆಡಳಿತ) ಶ್ರೀಮತಿ ಜಯಶ್ರೀ ಕಾರೇಕರ ಹೇಳಿದರು.

ಕರ್ನಾಟಕ ರಾಜ್ಯ ನೌಕರರ ಸಂಘದ ಸಭಾಭವನದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಧಾರವಾಡ ಶಹರ ಘಟಕ ಏರ್ಪಡಿಸಿದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹನೀಯರ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತಾನಾಡಿದರು. ಪುರುಷ ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸಲು ಮಹಿಳಾ ಶಕ್ತಿಯೇ ಕಾರಣ. ಪುರುಷ ಮಹಿಳೆ ಎಂಬ ಭೇದಭಾವವಿಲ್ಲದೆ ಮುನ್ನೆಡೆದಾಗ ಮಾತ್ರ ಸಮ ಸಮಾಜ ನಿರ್ಮಾಣ ಸಾಧ್ಯವೆಂದರು.

ಅಖಿಲ ಭಾರತ ಶಿಕ್ಷಕರ ಫೆಡರೇಶನ್ ಅಧ್ಯಕ್ಷ ಬಸವರಾಜ ಗುರಿಕಾರ ಮಾತನಾಡಿ, ಮಹಿಳೆ ಕೌಟುಂಬಿಕ ಬದುಕಿನ ಕಾರ್ಯ ನಿರ್ವಹಿಸುವುದರ ಜೊತೆಗೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರಲ್ಲಿರುವ ತಾಳ್ಮೆ, ಸಹನೆಯ ಕಾರಣದಿಂದ ಸಾಧನೆ ಮಾಡಲು ಸಾಧ್ಯವಾಗುತ್ತಿದೆ. ಶಿಕ್ಷಕರ ಸಂಘದ ಬೈಲಾದಲ್ಲಿ ಮಹಿಳಾ ಶಿಕ್ಷಕಿಯರಿಗೆ ಶೇಕಡಾ 33% ರಷ್ಟು ಮಹಿಳಾ ಮೀಸಲಾತಿ ನೀಡಿದ ಏಕೈಕ ಸಂಘ ಇದಾಗಿದ್ದು ಇಲ್ಲಿ ಮಹಿಳೆಯರಿಗೆ ಮುಕ್ತ ಅವಕಾಶ ಹಾಗೂ ಸ್ವಾತಂತ್ರ ನೀಡಲಾಗಿದೆ ಎಂದರು.

ಶಹರ ಘಟಕದ ಅಧ್ಯಕ್ಷೆ ಶಾಂತಾ ಶೀಲವಂತ ಅಧ್ಯಕ್ಷತೆ ವಹಿಸಿ ಮಾತನಾಡಿ 12 ನೇ ಶತಮಾನದಲ್ಲಿ ಸ್ತ್ರೀಗೆ ಸ್ವಾತಂತ್ರ ಸಿಕ್ಕ ಕಾರಣ ಇಂದು ಮಹಿಳೆ ತನ್ನ ಸಾಧನೆ ಮಾಡಲು ಅನುಕೂಲವಾಗಿದೆ. ಪುರಷ ಮಹಿಳೆ ಎಂಬ ಭೇಧ ಭಾವ ತೊಡೆದು ಹಾಕಿದ ಕಾರಣ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದೆ ಎಂದರು.

ಕ್ಷೇತ್ರಶಿಕ್ಷಣಾಧಿಕಾರಿ ಅಶೋಕಕುಮಾರ ಸಿಂದಗಿ, ಕ್ಷೇತ್ರ ಸಮನ್ವಯಾಧಿಕಾರಿ ಮಂಜುನಾಥ ಅಡಿವೇರ, ಶಿಕ್ಷಕ ಸಂಘದ ಜಿಲ್ಲಾಧ್ಯಕ್ಷ ವಿ.ಎಫ್ ಚುಳಕಿ, ವಾಯ್ ಎಚ್ ಬಣವಿ, ರಾಜಶೇಖರ ಹೊನ್ನಪ್ಪನವರ, ಅಕ್ಬರಅಲಿ ಸೋಲಾಪೂರ, ಅಯ್ಯುಬ ಶೇಕ, ಎನ್. ಸಿ. ಪಾಟೀಲ, ಅಶೋಕ ಎನ್ ವಾಯ್, ವೀಣಾ ಹೊಸಮನಿ, ಬಿ. ಐ ಮನಗುಂಡಿ, ಎನ್. ಆರ್. ಪಟೇಲ, ಶೋಭಾ ಬಿಂಗೇರಿ, ಡಿ. ವಿ ಸಜ್ಜನ, ಬಿ. ಡಿ ಪಾಸನ್ನವರ, ಪಿ. ಎಫ್ ಗುಡೇನಕಟ್ಟಿ, ಉಮೇಶ ಕುರುಬರ, ಮಂಜುನಾಥ ದೊಡಮನಿ, ಗದ್ದೀಕೇರಿ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು. ರಮೇಶ ಲಿಂಗದಾಳ ಪ್ರಾಸ್ತಾವಿಕ ಮಾತನಾಡಿದರು. ಎಮ್ ಆರ್ ಕಬ್ಬೇರ ನಿರೂಪಿಸಿದರು. ಎಂ ಸಿ ಎಲಿಗಾರ ವಂದಿಸಿದರು. ಸಮಾರಂಭದಲ್ಲಿ ವಿವಿಧಕ್ಷೇತ್ರದಲ್ಲಿಸೇವೆಸಲ್ಲಿಸಿದಮಹಿಳೆಯರನ್ನು ಸನ್ಮಾನಿಸಲಾಯಿತು ನಂತರ 300 ಕ್ಕೂ ಹೆಚ್ಚು ಮಹಿಳಾ ಶಿಕ್ಷಕಿಯರನ್ನು ಸತ್ಕರಿಸಲಾಯಿತು.

# ಪರೀಕ್ಷಾ ಕಿಟ್ ವಿತರಣೆ



**ಹುಬ್ಬಳ್ಳಿ :** ಈಶ್ವರ ನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಎಕೆ ಫೌಂಡೇಶನ್ ವತಿಯಿಂದ ಸ್ಕೂಲ್ ಬ್ಯಾಗ್ ಹಾಗೂ ಪರೀಕ್ಷೆ ಕಿಟ್ಟನ್ನು ಫೌಂಡೇಶನ್ ಅಧ್ಯಕ್ಷರಾದ ವೆಂಕಟೇಶ್ ಅಶೋಕ ಕಾಟವೆ ವಿತರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಉಪಾಧ್ಯಾಯ ನಾಗರಹಳ್ಳಿ ಅವರು ಮಾತನಾಡಿ ವೆಂಕಟೇಶ್ ಕಾಟವೆ ಅವರು 2023-24 ಸಾಲಿನಲ್ಲಿ ಬಡ ವಿದ್ಯಾರ್ಥಿಗಳಿಗೆ ಸುಮಾರು ಎರಡುವರೆ ಸಾವಿರು ಜಥಚಿಟ ಕಿಟ್ ಬ್ಯಾಗ್ ಹಾಗೂ ಪುಸ್ತಕವನ್ನು ವಿತರಿಸಿದ್ದಾರೆ. ಅವರಿಗೆ ವಿದ್ಯಾರ್ಥಿಗಳ ಬಗ್ಗೆ ಇರುವ ಕಾಳಜಿ ಅಪಾರ ಹಾಗೂ ಬಡ ಜನರ ಬೆನ್ನೆಲುಬುವಾಗಿ ನಿಂತು ಶಿಕ್ಷಣ ಕ್ಷೇತ್ರ ಅಲ್ಲದ್ದೆ ಸಾಮಾಜಿಕ, ಧಾರ್ಮಿಕ ಹಾಗೂ ಅನೇಕ ರಂಗದಲ್ಲೂ ಅವರು ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀ ಸಿದ್ದಾರೂಢರ ಅನುಗ್ರಹದಿಂದ ಭವಿಷ್ಯದಲ್ಲಿ ಜನ ಸೇವೆಗಾಗಿ ಒಬ್ಬ ಸಮರ್ಥ ನಾಯಕನಾಗಿ ಬೆಳೆಯಬೇಕು ಎಂದು ಶುಭ ಹಾರೈಸಿದರು.

ವಾರ್ಡಿನ ಪ್ರಮುಖರಾದ ಗಂಗಾಧರ ಟಿಕಾರೆ, ಶಕ್ತಿ ಕೇಂದ್ರದ ಪ್ರಮುಖರಾದ ವೆಂಕಟೇಶ್ ಅಂಬಿಗೇರ್,ಸಚಿನ್‌ಪೂಜಾರಿ,ಆನಂದಬಾಕಳೆ, ಮುಸ್ತಾಕ್ ಅಹಮದ್ ಜವಳಿ, ಸುಲೇಮಾನ್ ಭೋಜಗಾರ,ಆಕಾಶ್ ರಂಗ್ರೇಜ್, ಮಹೇಂದ್ರ ಮಗಜಿಕೊಂಡಿ, ಶ್ರೀಧರ್ ಕಲ್ಬುರ್ಗಿ,ಭರತ್ ಮೆಹರವಾಡೆ ಸೇರಿದಂತೆ ಸಮಸ್ತ ಈಶ್ವರ ನಗರದ ನಾಗರಿಕರು ಉಪಸ್ಥಿತರಿದ್ದರು.

# ವಿದ್ಯಾರ್ಥಿನಿಯರು ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಬೇಕು: ಪಿಎಸ್‌ಐ ರುಕ್ಮಣಿ




**ಬೆಳಗಾವಿ :** ಇಂದಿನ ಬದಲಾಗುತ್ತಿರುವ ಆಧುನಿಕ ಕಾಲದಲ್ಲಿ ವಿದ್ಯಾರ್ಥಿನಿಯರು ಎಲ್ಲ ಕ್ಷೇತ್ರದಲ್ಲಿ ಮುನ್ನಡೆದು ಸಾಧನೆಗೈಯಬೇಕೆಂದು ಕ್ಯಾಂಪ ಪೋಲಿಸ ಠಾಣೆಯ ಪಿ.ಎಸ್.ಐ ಎ.ರುಕ್ಮಣಿ ಅವರು ಅಭಿಪ್ರಾಯಪಟ್ಟರು.

ಬೆಳಗಾವಿಯಭರತೇಶಬಿಬಿಎಮಹಾವಿದ್ಯಾಲಯದಲ್ಲಿ ಇತ್ತಿಚಿಗೆ ಆಚರಿಸಲಾದ ವಿಶ್ವ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ಮಹಿಳೆಯರು ಎಲ್ಲ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುತ್ತಿದ್ದಾರೆ. ಈ ಸಾಧನೆ ಇನ್ನೂ ಎತ್ತರಕ್ಕೆ ಬೆಳೆಯಬೇಕಾಗಿದೆ. ಈ ಹಿನ್ನಲೆಯಲ್ಲಿ ವಿದ್ಯಾರ್ಥಿನಿಯರು ಉನ್ನತ ಶೀಕ್ಷಣ ಪಡೆದುಕೊಂಡು ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕೆಂದು ಅವರು ತಿಳಿಸಿದರು.

ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಭರತೇಶ ವೈದ್ಯಕೀಯ ಮಹಾವಿದ್ಯಾಲಯದ ಉಪನ್ಯಾಸಕಿ ಡಾ.ರಾಜಶ್ರೀ ಮಿಸಾಳೆ ಅವರು ಮಾತನಾಡಿ ಮಹಿಳೆಯರು ತಮ್ಮ ದಿನನಿತ್ಯದ ಕಾರ್ಯಗಳ ಜೊತೆಗೆ ಆರೋಗ್ಯದ ಬಗ್ಗೆಯೂ ವಿಶೇಷ ಕಾಳಜಿ ಹೊಂದಿರಬೇಕೆಂದು ಅವರು ತಿಳಿಸಿದರು. ಜೈನ ಇಂಜನಿಯರಿಂಗ್ ಸಂಸ್ಥೆಯ ಮುಖ್ಯ ಮಾರುಕಟ್ಟೆ ಅಧಿಕಾರಿ ಅನುಪಮಾ ಶಿರಹಟ್ಟಿ ಅವರು ಮಾತನಾಡಿ, ವ್ಯವಹಾರಿಕ ಜೀವನದಲ್ಲಿ ಮಹಿಳೆಯರ ಪಾತ್ರ ಮತ್ತು ಅವರು ಎದುರಿಸುವ ಸವಾಲುಗಳ ಬಗ್ಗೆ ಮಾಹಿತಿ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಭರತೇಶ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿನೋದ ದೊಡ್ಡಣ್ಣವರ ಅವರು ಮಾತನಾಡಿ,ವಿದ್ಯಾರ್ಥಿನಿಯರು ಉನ್ನತ ಶಿಕ್ಷಣ ಪಡೆದುಕೊಂಡು ಜೀವನದಲ್ಲಿ ಸಾಧನೆ ಮಾಡುವ ಮೂಲಕ ಮುಂಬರುವ ಯುವ ಪೀಳಿಗೆಗೆ ಮಾದರಿಯಾಗಬೇಕೆಂದು ಅವರು ತಿಳಿಸಿದರು.

ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಶರದ ಬಾಳಿಕಾಯಿ ಆಡಳಿತ ಮಂಡಳಿ ಸದಸ್ಯ ಪ್ರಶಾಂತ ಕಳ್ಳಿಮನಿ, ನಿರ್ದೇಶಕ ಡಾ. ಪ್ರಶಾಂತ ಕಾಂಬಳೆ, ಡಾ.ಪ್ರಸಾದ ದಡ್ಡಿಕರ, ಮೊದಲಾದವರು ಉಪಸ್ಥಿತರಿದ್ದರು.



**ನಾಲತವಾಡ: ಸ್ಥಳೀಯ ಜಂಗಮ ಸಮುದಾಯದಿಂದ ಇಂದು ಶ್ರೀ ರೇಣುಕಾಚಾರ್ಯ ಜಯಂತಿಯನ್ನು ಪಟ್ಟಣದ ವಿವಿಧ ಶಾಲೆ ಕಾಲೇಜು ಹಾಗೂ ಕಚೇರಿಗಳಲ್ಲಿ ಆಚರಿಸಲು ರುದ್ರಯ್ಯ ರೇವಣಕಿಮಠರವರು ಮೂವತ್ತಕ್ಕೂ ಅಧಿಕ ಭಾವಚಿತ್ರಗಳನ್ನು ಉಚಿತವಾಗಿ ವಿತರಿಸಿದರು.ಪಟ್ಟಣದ ಬಸವೇಶ್ವರ ನಗರದ ಪಶು ಆಸ್ಪತ್ರೆಯ ಮುಂಭಾಗದ ಮುಖ್ಯ ರಸ್ತೆಯಲ್ಲಿ ರೇಣುಕಾಚಾರ್ಯರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಪೂಜಿಸಿ ಸಂಕ್ಷಿಪ್ತವಾಗಿ ಆಚರಿಸಲಾಗುವುದು ಎಂದು ಹೋಬಳಿ ಅಧ್ಯಕ್ಷರಾದ ಶಿವಪುತ್ರಯ್ಯ ಸ್ಥಾವರಮಠ ತಿಳಿಸಿದರು, ಈ ವೇಳೆ ಮಹಾಂತೇಶ ಮೆನೆದಾಳಮಠ, ಮಲ್ಲಯ್ಯ ತಾಳಿಕೋಟಿಮಠ, ಮಲ್ಲಯ್ಯ ಸ್ಥಾವರಮಠ, ಗುರುಮೂರ್ತಿ ಕಣಕಾಲಮಠ, ವಿಶ್ವೇಶ್ವರಯ್ಯ ಕಣಕಾಲಮಠ, ಮಂಜುನಾಥ ಗಣಾಚಾರಿ, ಮಲ್ಲಯ್ಯ ಹಿರೇಮಠ ಇದ್ದರು.**

## ಮಹಾನಗರ ಪಾಲಿಕೆ 'ಎ' ಖಾತಾ ಮತ್ತು 'ಬಿ' ಖಾತಾ ನೋಂದಣಿ: ದೂರು ಸಲ್ಲಿಸಲು ಮನವಿ

**ಬೆಳಗಾವಿ :** ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ ಹಾಗೂ ಮಹಾನಗರ ಪಾಲಿಕೆಗಳ ಸಂಯುಕ್ತ ಆಶ್ರಯದಲ್ಲಿ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಇ-ಖಾತಾ' ಬೃಹತ್ ಆಂದೋಲನದ ಪ್ರಯುಕ್ತ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 'ಎ' ಖಾತಾ ಮತ್ತು 'ಬಿ' ಖಾತಾ ಪಡೆಯುವ ಕುರಿತು ಅಭಿಯಾನ ಪ್ರಾರಂಭಿಸಲಾಗಿದ್ದು, ಸಾರ್ವಜನಿಕರು ಅದರ ಲಾಭ ಪಡೆದುಕೊಳ್ಳಬೇಕು ಎಂದು ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ಈ ವಿಷಯವಾಗಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿರುವ ಕುರಿತು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಸಾರವಾಗುತ್ತಿರುತ್ತದೆ. 'ಎ' ಖಾತಾ ಮತ್ತು 'ಬಿ' ಖಾತಾ ನೋಂದಣಿಗಾಗಿ ಮಧ್ಯವರ್ತಿಗಳ ಮೂಲಕ ಅರ್ಜಿ ಸಲ್ಲಿಸಬಾರದು.

ಸಾರ್ವಜನಿಕರು ನೇರವಾಗಿ ಅರ್ಜಿ ಸಲ್ಲಿಸಿ ಖಾತಾ ಪಡೆಯಬೇಕು. ಒಂದು ವೇಳೆ ಮಧ್ಯವರ್ತಿಗಳು ಅಥವಾ ಪಾಲಿಕೆ ಅಧಿಕಾರಿ ಹಾಗೂ ಸಿಬ್ಬಂದಿಗಳು ಲೋಪವೆಸಗುತ್ತಿದ್ದರೆ ಅಥವಾ ಅನಾವಶ್ಯಕವಾಗಿ ವಿಳಂಬ ಮಾಡುತ್ತಿದ್ದರೆ ಸಾರ್ವಜನಿಕರು ನೇರವಾಗಿ ಪಾಲಿಕೆಯ ಆಯುಕ್ತರಿಗೆ ಅಥವಾ ದೂರವಾಣಿ ಸಂಖ್ಯೆ: 0831-2405304, 2405337 ಗೆ ಸಂಪರ್ಕಿಸಿ ದೂರು ಸಲ್ಲಿಸಬಹುದಾಗಿದೆ ಎಂದು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಜಾನಪದ ಕಲಾ ಸೌರಭ ಉತ್ಸವ

**ಬೆಳಗಾವಿ :** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಹಾಗೂ ಶ್ರೀ ಸ್ವಾಮಿ ವಿವೇಕಾನಂದ ಯುವ ಸಾಹಿತ್ಯ ಸಾಂಸ್ಕೃತಿಕ ಸಂಘ, ಯರಗಟ್ಟಿ ಇವರ ಸಂಯುಕ್ತ ಆಶ್ರಯದಲ್ಲಿ ಜಾನಪದ ಕಲಾ ಉತ್ಸವ -2025ರ ಕಾರ್ಯಕ್ರಮ ಮಾರ್ಚ 9, ರಿಂದ 11 ರವರೆಗೆ ಸವದತ್ತಿ/ ಯರಗಟ್ಟಿ, ತಾಲೂಕಿನ ಮಾಡಮಗೇರಿ ಗ್ರಾಮದಲ್ಲಿ ಜರುಗಿತು.

ಯುವ ಮುಖಂಡರಾದ ಸೋಮಪ್ಪಾ ಪೂಜೇರಿ ಮಾತನಾಡಿ ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಜನಪದ ಕಲೆ ಎಂಬುದು ಸರ್ವಕಾಲಕ್ಕೂ ಶ್ರೇಷ್ಠ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತರು ಸಂಗಪ್ಪಾ ಚೂರಿ, ರುದ್ರಪ್ಪ ಮಾದರ, ಯಮನವ್ವ ಮಾದರ ಹಾಗೂ ಮಾಡಮಗೇರಿ ಗ್ರಾಮದ ಗುರು ಹಿರಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಬಸ್ತವಾಡ: 4.48 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ



**ಬೆಳಗಾವಿ :** ಬೆಳಗಾವಿ ಗ್ರಾಮೀಣ ಕ್ಷೇತ್ರದ ಬಸ್ತವಾಡ ಗ್ರಾಮದಲ್ಲಿ ನೀರು ನಿರ್ವಹಣಾ ಘಟಕ ನಿರ್ಮಾಣದ ಕಾಮಗಾರಿಗೆ ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಕ್ಷೇತ್ರದ ಶಾಸಕರೂ ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ವಿಶೇಷ ಪ್ರಯತ್ನದಿಂದ ಸುಮಾರು 4.48 ಕೋಟಿ ರೂ. ಗಳ ವೆಚ್ಚದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ಕಾಮಗಾರಿಯ ಮೂಲಕ ಗ್ರಾಮದಲ್ಲಿನ ಕೊಳಚೆ ನೀರನ್ನು ನೀರು ನಿರ್ವಹಣಾ ಘಟಕಕ್ಕೆ ವರ್ಗಾಯಿಸಿ, ಫಿಲ್ಟರ್ ಮಾಡುವ ಮೂಲಕ ನೀರನ್ನು ರೈತರ ಹೊಲಗದ್ದೆಗಳಿಗೆ ಬಿಡುಗಡೆಗೊಳಿಸುವ ಗುರಿ ಹೊಂದಲಾಗಿದೆ. ಈ ಕಾಮಗಾರಿಯಿಂದ ಗ್ರಾಮದ ನೈರ್ಮಲ್ಯದ ಜೊತೆಗೆ ಸ್ವಚ್ಚತೆ ಕಾಪಾಡಲು ಸಹಕಾರಿಯಾಗಲಿದೆ.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶಿಲ್ಪಾ ಪ ಪಾಟೀಲ, ಉಪಾಧ್ಯಕ್ಷರಾದ ವಿಠ್ಠಲ ಗ ಸಾಂಬ್ರೇಕರ್, ಮನೋಹರ ಮುಚ್ಚಂಡಿ, ತವನಪ್ಪ ಬಡಿಗೇರ, ಭರಮಪ್ಪ ಗೌಡಕೆಂಚಪ್ಪಗೋಳ, ರಾಮಾ ಕಾಕತ್ಕರ್, ಜ್ಯೋತಿಬಾ ಚೌಗುಲೆ, ಸಮೀರ್ ಸನದಿ, ಲಕ್ಷ್ಮೀ ಸಾಂಬ್ರೇಕರ್, ಅರ್ಜುನ ಪಾಟೀಲ, ರಮೇಶ ಹುಣಶೀಮರದ, ಮನೋಹರ ಬಾಂಡಗಿ, ಬಾಳಾರಾಮ ಪಾಟೀಲ,

ಶಿವಾಜಿ ಕಾಕತ್ಕರ್, ಈರಪ್ಪ ಚೌಗುಲೆ, ಗುಂಡು ಪಾಟೀಲ, ಮಹಾವೀರ ಸಂಕೇಶ್ವರಿ, ಪದ್ಮರಾಜ ಪಾಟೀಲ,ಭರತೇಶಸಂಕೇಶ್ವರಿ,ದೇವಪ್ಪಬಡವಣ್ಣವರ, ಅಶೋಕ ಜಕ್ಕಣ್ಣವರ, ಬಸೀರಸಾಬ್ ಕಿಲ್ಲೇದಾರ್, ಮೆಹಬೂಬ್ ಮುಲ್ಲಾ, ಕೃಷ್ಣ ಕೋಲಕಾರ, ಮಾಣಿಕ್ಯ ಕೋಲಕಾರ, ಮಹಾಂತೇಶ ಹಿರೇಮಠ್, ಸಾಗರ ತಹಶಿಲ್ದಾರ, ಡಿ.ಎಂ.ಬನ್ನೂರ್, ಶ್ವೇತಾ ಡಿ.ಆರ್, ಪಿಡಿಓ, ಗುತ್ತಿಗೆದಾರರು, ಗ್ರಾಮದ ಅನೇಕರು ಉಪಸ್ಥಿತರಿದ್ದರು.

# ಲಿಂಗಾಯತ ಧರ್ಮದ ಅವಹೇಳನ ಖಂಡನೀಯ: ಬಸವರಾಜ ರೊಟ್ಟಿ



**ಬೆಳಗಾವಿ :** ಲಿಂಗಾಯತ ಧರ್ಮದ ಕುರಿತು ಅವಹೇಳನಕಾರಿಯಾಗಿ ಮಾತನಾಡುವುದು ಮತ್ತು ಲಿಂಗಾಯಿತಕ್ಕೆ ಸ್ವತಂತ್ರ ಧರ್ಮದ ಮಾನ್ಯತೆ ಕೇಳುತ್ತಿರುವುದು ತಪ್ಪು ಎಂಬ ಪಂಚಾಚಾರ್ಯರ ಹೇಳಿಕೆಗಳು ಖಂಡನೀಯ ಎಂದು ಜಾಗತಿಕ ಲಿಂಗಾಯಿತ ಮಹಾಸಭೆಯ ಜಿಲ್ಲಾ ಅಧ್ಯಕ್ಷ ಬಸವರಾಜ ರೊಟ್ಟಿ ಹೇಳಿದ್ದಾರೆ.

ಪತ್ರಿಕಾ ಪರಿಷತ್ತಿನಲ್ಲಿಂದು ಮಾತನಾಡಿದ ಅವರು ಪಂಚಾಚಾರ್ಯರಲ್ಲಿ ಒಗ್ಗಟ್ಟಿಲ್ಲ ರಂಭಾಪುರಿ ಜಗದ್ಗುರುಗಳು ಮತ್ತು ಕೇದಾರ ಪೀಠದ ಜಗದ್ಗುರುಗಳು ಒಂದು ಗುಂಪಿನಲ್ಲಿದ್ದರೆ ಶ್ರೀಶೈಲ ಕಾಶಿ ಮತ್ತು ಉಜ್ಜಯಿನಿ ಪೀಠಗಳ ಜಗದ್ಗುರುಗಳು ಮತ್ತೊಂದು ಗುಂಪು ರಚಿಸಿಕೊಂಡಿದ್ದಾರೆ. ಈ ಪಂಚಾಚಾರ್ಯರ ಉಗಮದ ಬಗ್ಗೆ ಕಾಲ್ಪನಿಕ ಕಥೆಗಳಿವೆ ನಿಖರ ಸಾಕ್ಷಾಧಾರಗಳು ಇಲ್ಲ, ಶಿವಲಿಂಗದ ಮೇಲೆ ಪಾದಗಳನ್ನಿಡುವ ವಿಚಿತ್ರ ಆಚರಣೆ ಲಿಂಗಾಯಿತರ ಮತ್ತು ಹಿಂದೂ ಶೈವರ ಅಕ್ರೋಶಕ್ಕೆ ಕಾರಣವಾಗಿದೆ. ಪಂಚಾಚಾರ್ಯರು ಐದು ಕಲ್ಲುಗಳಿಂದ ಹುಟ್ಟಿದರು ಎಂಬ ಕಟ್ಟು ಕಥೆಗಳನ್ನು ಲಿಂಗಾಯತರು ನಂಬುತ್ತಿಲ್ಲ, ವೀರಶೈವ ಮತ್ತು ಲಿಂಗಾಯಿತ ಒಂದೇ ಎಂದು ನಂಬಿಸಲು ಪಂಚಾಚಾರ್ಯರು ಪ್ರಯತ್ನಿಸುತ್ತಿದ್ದಾರೆ ಅದನ್ನು ಲಿಂಗಾಯಿತರು ಒಪ್ಪುವುದಿಲ್ಲ,

ಬಸವಣ್ಣನವರ ಮತ್ತು ಸಮಸ್ತ ಶರಣ ಸಂಕುಲ ರಚಿಸಿರುವ 23 ಸಾವಿರ ವಚನಗಳ ಪ್ರಭಾವದಿಂದಾಗಿ ಬಹುಪಾಲು ಲಿಂಗಾಯತರು ಪಂಚಾಚಾರ್ಯರನ್ನು ತೊರೆಯುತ್ತಿದ್ದಾರೆ ಇದರಿಂದ ಹತಾಶರಾದ ಅವರು ಲಿಂಗಾಯತ ಮತ್ತು ಲಿಂಗಾಯತ ಧರ್ಮದ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ ಅದನ್ನವರು ನಿಲ್ಲಿಸಬೇಕು ಇಲ್ಲದೆ ಹೋದಲ್ಲಿ ಸಮಸ್ತ ಲಿಂಗಾಯಿತರು ಅವರಿಗೆ ತಕ್ಕ ಉತ್ತರ ನೀಡುತ್ತಾರೆ ಎಂದವರು ಹೇಳಿದರು.

ಪಂಚಾಚಾರ್ಯರು ಮತ್ತು ಅವರ ಅನುಯಾಯಿಗಳು ವೈದಿಕ ಧರ್ಮದ ಎಲ್ಲ ನಂಬಿಕೆಗಳನ್ನು ನಂಬಲು ಮತ್ತು ಆಚರಿಸಲು ಅವರು ಸ್ವತಂತ್ರರು ಯಾವುದೇ ವೈದಿಕ ಗ್ರಂಥಗಳನ್ನು ಓದಲು ಪ್ರಸ್ತಾಪಿಸಲು ಸಂಪೂರ್ಣ ಅಧಿಕಾರ ಉಳ್ಳವರು ಆದರೆ ಶರಣ ತತ್ವಗಳನ್ನು ನಿರೂಪ ಗೊಳಿಸುವುದು ತಪ್ಪಾಗಿ ಅರ್ಥೈಸುವುದು ಮತ್ತು ಶರಣ ಧರ್ಮದಲ್ಲಿ ಮಧ್ಯಪ್ರವೇಶಿಸುವುದನ್ನು ನಿಲ್ಲಿಸಬೇಕು ಎಂದು ಅವರು ಎಚ್ಚರಿಕೆ ನೀಡಿದರು.

ಕೊಲ್ಹಾಪುರ್ ಹತ್ತಿರದ ಕಣ್ಣೇರಿ ಮಠದ ಸ್ವಾಮೀಜಿಯವರುಇತ್ತೀಚೆಗೆಬಸವಣ್ಣನವರ ಹಾಗೂ ಲಿಂಗಾಯತ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ್ದು ಕೂಡ ಖಂಡನೀಯವಾಗಿದೆ ಅವರು ತಮ್ಮ ಮಾತುಗಳನ್ನು ಹಿಂದಕ್ಕೆ ಪಡೆದು ಸಮಾಜದ ಶ್ರಮ ಕೇಳಬೇಕು ಎಂದು ಅವರು ಈ ಸಂದರ್ಭದಲ್ಲಿ ಆಗ್ರಹಿಸಿದರು.

ಪತ್ರಿಕಾ ಪರಿಷತ್ತಿನಲ್ಲಿ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಪದಾಧಿಕಾರಿಗಳಾದ ಅಶೋಕ್ ಮಳಗಲಿ , ಸಿಎಂ ಬೂದಿಹಾಳ, ಮುರಿಗೆಪ್ಪ ಬಾಳಿ ಮತ್ತು ಪ್ರವೀಣ ಚಿಕ್ಕಲಿ ಉಪಸ್ಥಿತರಿದ್ದರು.

# ಶೈಕ್ಷಣಿಕ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣಾ ನೀತಿ ಅನುಷ್ಠಾನ ಕಡ್ಡಾಯ: ಶೇಖರಗೌಡ ರಾಮತ್ನಾಳ್




**ಕೊಪ್ಪಳ :** ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023ನ್ನು ಪ್ರತಿಯೊಂದು ಶೈಕ್ಷಣಿಕ ಸಂಸ್ಥೆಗಳಲ್ಲಿ ಕಡ್ಡಾಯವಾಗಿಅನುಷ್ಠಾನಗೊಳಿಸಬೇಕೆಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ ರಾಮತ್ನಾಳ್ ಹೇಳಿದರು.

ಅವರು ಗುರುವಾರ ಕೊಪ್ಪಳ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಂಯುಕ್ತಾಶ್ರಯದಲ್ಲಿ, 'ಕಡ್ಡಾಯ ಮತ್ತು ಉಚಿತ ಶಿಕ್ಷಣ ಹಕ್ಕು ಕಾಯ್ದೆ–2009" ಅನುಷ್ಠಾನಕುರಿತುಶಾಲಾಶಿಕ್ಷಣಇಲಾಖೆಯ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಹಾಗೂ ನುರಿತ ಶಿಕ್ಷಕರ ನೇಮಕವಾದಲ್ಲಿ ಮಾತ್ರಮಕ್ಕಳ ಉಚಿತ ಮತ್ತುಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ಆಶಯ ಈಡೇರಲಿದೆ. ತನ್ಮೂಲಕ ಸರ್ಕಾರಿ ಶಾಲೆಗಳ ಸಬಲೀಕರಣ ಸಾಧ್ಯವಾಗಲಿದೆ. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ–2009ರ ಸೆಕ್ಷನ್ 31ರಡಿಯಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಈ ಕಾಯ್ದೆಯ ಮೇಲ್ವಿಚಾರಣೆಯ ಅಧಿಕಾರ ಮತ್ತು ಜವಾಬ್ದಾರಿಯನ್ನು ಹೊಂದಿದೆ. ಈ ಆರ್ಥಿಕ ಸಾಲಿನಲ್ಲಿ ಆಯೋಗವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯು ಈ ಕಾಯ್ದೆ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಿದೆ. ಈ ಸಭೆಗಳಲ್ಲಿ ಕಂಡುಬಂದ ಅಂಶಗಳ ಬಗ್ಗೆ ಅಧ್ಯಯನ ಮಾಡಿ, ಕಾಯ್ದೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅವಶ್ಯವಿರುವ ಅಗತ್ಯ ಸಲಹೆಗಳನ್ನು ಆಯೋಗವು ಸರಕಾರಕ್ಕೆ ನೀಡಲು ಉದ್ದೇಶಿಸಿದೆ ಎಂದರು.

ಖಾಸಗಿ ಶಾಲೆಗಳು ತಮ್ಮ ಶಾಲೆಯ ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಒಂಭತ್ತನೇಯ ತರಗತಿಯ ನಂತರ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ 10ನೇ ತರಗತಿಗೆ ದಾಖಲಿಸಿಕೊಳ್ಳದೇ ವರ್ಗಾವಣೆ ಪ್ರಮಾಣ ಪತ್ರವನ್ನು ನೀಡುತ್ತಿರುವ ಪ್ರಕರಣಗಳು ಕಂಡುಬರುತ್ತಿದೆ. ಕೆಲವು ವಿದ್ಯಾರ್ಥಿಗಳಿಗೆ ವಿವಿಧ ಕಾರಣಗಳಿಂದ ವರ್ಗಾವಣೆಪತ್ರನೀಡದೇಸತಾಯಿಸುತ್ತಿರುವ ಬಗ್ಗೆಯೂ ಸಾಕಷ್ಟು ದೂರುಗಳು ಆಯೋಗಕ್ಕೆ ಬಂದಿವೆ. ಆದ್ದರಿಂದ ಅನದಾನಿತ ಮತ್ತು ಅನುದಾನರಹಿತ ಶಾಲೆಗಳ ಮುಖ್ಯೋಪಾಧ್ಯಾಯರ ಕೊಠಡಿಯಲ್ಲಿ, ಆರ್.ಟಿ.ಐ ಸೆಲ್‌ನ ಸಂಪೂರ್ಣ ಮಾಹಿತಿಯುಳ್ಳ ಫಲಕಗಳನ್ನು ಪಾಲಕರಿಗೆ ಮತ್ತು ಮಕ್ಕಳಿಗೆ ಕಾಣುವಂತೆ ಪ್ರದರ್ಶಿಸಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ–2016 ಪರಿಷ್ಕರಣೆ–2023ರ ಅಡಿ ಶೈಕ್ಷಣಿಕ ಸಂಸ್ಥೆಗಳಲ್ಲಿ "ಮಕ್ಕಳ ರಕ್ಷಣಾ ಸಮಿತಿ" 'ಪೋಷಕರ ಸಮಿತಿಗಳನ್ನು' ರಚಿಸಿ ಸಭೆಗಳನ್ನು ನಿಯಮಿತವಾಗಿ ಆಯೋಜಿಸಬೇಕು. ಮಕ್ಕಳಿಗೆ ಲಭ್ಯವಾಗುವ ಸ್ಥಳಗಳಲ್ಲಿ 'ಸಲಹಾ ಪೆಟ್ಟಿಗೆ'ಯನ್ನು ಅಳವಡಿಸಬೇಕು. ಮಕ್ಕಳು ತುರ್ತು ಸಂದರ್ಭದಲ್ಲಿ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳನ್ನು, ಮಕ್ಕಳ ಸಹಾಯವಾಣಿ–1098/112ನ್ನು ನಿಗದಿತ ನಮೂನೆಯಲ್ಲಿ ಬರೆಯಿಸಬೇಕು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ 'ಪೊಲೀಸ್ ಪರಿಶೀಲನಾ' ವರದಿಯನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಂದ 'ಬದ್ಧತಾ ಪತ್ರ'ವನ್ನು ಹಾಗೂ 'ಮಕ್ಕಳಿಂದ ಬದ್ಧತಾ ಪತ್ರವನ್ನು' ಪಡೆದುಕೊಳ್ಳಬೇಕು. ಶಾಲಾ ವಾಹನಗಳು ನಿಗದಿತ ಬಣ್ಣ ಹೊಂದಿರಬೇಕು. ಈ ಶಾಲಾ ವಾಹನಗಳಲ್ಲಿ ಅಗ್ನಿ ನಂದಕ, ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಜಿ.ಪಿ.ಆರ್.ಎಸ್ ವ್ಯವಸ್ಥೆ, ಸೀಟ್ ಬೆಲ್ಟ್‌ಗಳನ್ನು ಹೊಂದಿರಬೇಕು. ನಿಗದಿಪಡಿಸಿದ ಪ್ರಮಾಣದಷ್ಟೇ ಮಕ್ಕಳನ್ನು ಕರೆತರುವುದು. ಶಾಲಾ ವಾಹನಗಳಲ್ಲಿ ಕಡ್ಡಾಯವಾಗಿ ಕನಿಷ್ಠಒಬ್ಬ ಮಹಿಳಾ ಸಿಬ್ಬಂದಿ ಅಥವಾ ಪರಿಚಾರಕರು ಇರಬೇಕು. ಮಕ್ಕಳ ರಕ್ಷಣೆಗೆ ಆಯೋಗವು ಬದ್ಧವಾಗಿದ್ದು, ಯಾವುದೇ ಚಿಕ್ಕಲೋಪವನ್ನುಆಯೋಗವು ಸಹಿಸುವುದಿಲ್ಲ ಎಂದು ಸೂಚನೆ ನೀಡಿದರು.

ಭಾರತ ಸಂವಿಧಾನವು ಮಕ್ಕಳಿಗೆ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ನೀಡಿದೆ. ಆದ್ದರಿಂದ 'ಯಾವುದೇ ಮಗುವು ಶಾಲೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕಾಗಿರುವುದು ಸರಕಾರದ ಆದ್ಯ ಕರ್ತವ್ಯವಾಗಿದೆ'. ಶಾಲೆಯಿಂದ ಹೊರಗುಳಿದ ಮಕ್ಕಳು ಇದ್ದಲ್ಲಿ ಗ್ರಾಮ ಪಂಚಾಯತ್‌ಮಟ್ಟದಲ್ಲಿರಚನೆಯಾಗಿರುವ 'ಶಿಕ್ಷಣ ಕಾರ್ಯಪಡೆ' 'ಮಕ್ಕಳ ರಕ್ಷಣಾ ಸಮಿತಿ'ಗಳಿಂದ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರಬೇಕು. ಅದಕ್ಕಾಗಿ ಎರಡು ಸಮಿತಿಗಳನ್ನು ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಜಿಲ್ಲೆಯಲ್ಲಿ ಅನಧಿಕೃತ ಕೋಚಿಂಗ್ ಸೆಂಟರ್ ಹಾವಳಿಯು ಅತ್ಯಧಿಕವಾಗಿದೆ. ಕೇಲವು ಕೋಚಿಂಗ್ ಸೆಂಟರ್‌ಗಳನ್ನು ಭೇಟಿ ನೀಡಿದ್ದು, ಅಲ್ಲಿನ ಮಕ್ಕಳಿಗೆ ನೀಡಿರುವ ಸೌಲಭ್ಯಗಳನ್ನು ತೀರಾ ನಿಕೃಷ್ಟವಾಗಿವೆ. ಸ್ವಚ್ಛವಾದ ಪರಿಸರವಿಲ್ಲ, ಮಲಗುವ ಕೋಣೆಗಳು ಇಲ್ಲ, ಯಾವುದೇ ಸುರಕ್ಷತಾ ಕ್ರಮಗಳನ್ನು ಅಳವಡಿಸಿಕೊಂಡಿರುವುದಿಲ್ಲ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ನಿಯಮಿತವಾಗಿ ಕೊಂಚಿಂಗ್ ಸೆಂಟರ್, ಅನಧಿಕೃತ ವಸತಿ ಶಾಲೆಗಳನ್ನು ಭೇಟಿ ನೀಡಿ, ಪರಿಶೀಲಿಸಿ, ಲೋಪವಿರುವ ಸಂಸ್ಥೆಗಳ ವಿರುದ್ಧನಿಯಮಾನುಸಾರಕ್ರಮಕೈಗೊಂಡು ವರದಿಯನ್ನು ಮಕ್ಕಳ ರಕ್ಷಣಾ ಆಯೋಗಕ್ಕೆ ನೀಡಬೇಕು. ತಪ್ಪಿದಲ್ಲಿ ಆಯೋಗವು ಸೂ–ಮೂಟೋ ಪ್ರಕರಣದಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳುತ್ತದೆಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರ್ ಗೌಡ ಜಿ ರಾಮತ್ನಾಳ್ ಅವರು ಎಚ್ಚರಿಕೆ ನೀಡಿದರು.

ಈ ಸಭೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಶ್ರೀಶೈಲ ಬಿರಾದಾರ ಸೇರಿದಂತೆ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಲಯ ಸಂಪನ್ಮೂಲ ಸಂಯೋಜಕರು, ಶಿಕ್ಷಣ ಸಂಯೋಜಕರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಸ್ಪರ್ಧಿಸುವುದು ಮುಖ್ಯ: ಯೋಗಾನಂದ



**ಕೊಪ್ಪಳ :** ಕ್ರೀಡೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಸ್ಪರ್ಧಿಸುವುದು ಮುಖ್ಯ ಎಂದು ಬಹದ್ದೂರ್ ಬಂಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಯೋಗಾನಂದ ಹೇಳಿದರು.

ಅವರು ತಾಲೂಕಿನ ಚುಕ್ಕನಕಲ್ ಗ್ರಾಮದಲ್ಲಿ ಜಿಸಿಸಿ ಕ್ರಿಕೆಟ್ ಕ್ಲಬ್ ಇವರ ವತಿಯಿಂದ ಆಯೋಜಿಸಿದ್ದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿ ಪ್ರತಿಯೊಂದು ಕ್ರೀಡೆಯು ದೈಹಿಕ ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ನಿತ್ಯ ಕ್ರೀಡೆಗಳನ್ನು ಆಡುವುದರ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ತಿಳಿಸಿದರು.

ಪ್ರಥಮ ಬಹುಮಾನವನ್ನು ಲಾಚನಕೇರಿ ತಂಡ ಪಡೆದುಕೊಂಡಿತು.

ದ್ವಿತೀಯ ಬಹುಮಾನ ಚಿಕ್ಕನಕಲ್ ಜೆಸಿಸಿ ತಂಡ ಗೆದ್ದುಕೊಂಡಿದೆ.

ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯ ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ಯುವ ಮುಖಂಡ ಫಕ್ರುದ್ದೀನ್ ನದಾಫ್, ಸಿದ್ದನಗೌಡ ಪೊಲೀಸ್ ಪಾಟೀಲ್, ಪ್ರಕಾಶ್, ಹನುಮಂತ ಹರಿಜನ್, ಫಕ್ಕಿರೆಡ್ಡಿ ಮರಿಯಪ್ಪ ಟೂರ್ನಿಯಾ ಆಯೋಜಕರಾಗಿ ಜಿಸಿಸಿ ತಂಡದ ಎಲ್ಲಾ ಆಟಗಾರರು ಪಾಲ್ಗೊಂಡಿದ್ದರು.

# ಕೊಪ್ಪಳದ ಶ್ರೀಕಾಂತ್ ಕಲಾಲ್‌ಗೆ ಕರಾಟೆ ತರಬೇತಿದಾರರೆಂದು (ಕೆಐಓ) ಪರವಾನಿಗೆ




**ಕೊಪ್ಪಳ:** ನಗರದ ಸಾಯಿ ಬುಡೋ ಕಾನ್ ಕರಾಟೆ ತರಬೇತಿ ಸಂಸ್ಥೆಯ ಮುಖ್ಯಸ್ಥ ಶ್ರೀಕಾಂತ್ ಕಲಾಲ್ ರವರಿಗೆ ಶಿವಮೊಗ್ಗದ ರೆನ್ಸಿ ವಿನೋದ್ ರವರ ಬೆಂಬಲದಿಂದ ವಿಶ್ವ ಕರಾಟೆ ಫೆಡರೇಶನ್ ನಿಂದ ಗುರುತಿಸಲ್ಪಟ್ಟ (ಕೆ ಐ ಓ) ಭಾರತದಲ್ಲಿ ಕರಾಟೆ ರಾಷ್ಟ್ರೀಯ ಒಕ್ಕೂಟ ತರಬೇತಿದಾರರ ಪರವಾಗಿ ಲಭಿಸಿದೆ.

ಕೊಪ್ಪಳದ ಕರಾಟೆ ಪಟು ಮತ್ತು ತರಬೇತಿದಾರ ಶ್ರೀಕಾಂತ್ ಕಲಾಲ್ ರವರಿಗೆ ರಾಷ್ಟ್ರ ಮಟ್ಟದಲ್ಲಿ ಗುರುತಿಸಲ್ಪಟ್ಟ ಇಂತಹ ರಾಷ್ಟ್ರ ಅಂತರಾಷ್ಟ್ರ ಮಟ್ಟದ ಕರಾಟೆ ಸಂಸ್ಥೆಯ ಪರವಾನಿಗೆ ಲಭಿಸಿರುವುದಕ್ಕೆ ಇಲ್ಲಿನ ಕರಾಟೆ ಪಟು ಗಳು ಕೊಪ್ಪಳದಲ್ಲಿ ಸಂಭ್ರಮಿಸಿ ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಹಳಿಯಾಳ ಆರ್‌ಸೆಟಿ ಸಂಸ್ಥೆ: ವಿವಿಧ ತರಬೇತಿಗಳಿಗೆ ಅರ್ಜಿ ಆಹ್ವಾನ

**ಕೊಪ್ಪಳ :** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ಸಂಸ್ಥೆಯಿಂದ ನಿರುದ್ಯೋಗ ಯುವಕರಿಗಾಗಿ ಇಲೇಕ್ಟ್ರಿಕ್ ಮೋಟಾರ್ ರಿವೈಂಡಿಂಗ್ ಮತ್ತು ಪಂಪಸೆಟ್ ರಿಪೇರಿ ಹಾಗೂ ಯುವಕ–ಯುವತಿಯರಿಗೆ ಕಂಪ್ಯೂಟರ್ ಡಿ.ಟಿ.ಪಿ ತರಬೇತಿಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಆಸಕ್ತ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕರಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

19 ರಿಂದ 45 ವಯೋಮಾನದ ನಿರುದ್ಯೋಗಿ ಯುವಕರಿಗಾಗಿ ಮಾರ್ಚ್ ಮಾಹೆಯ 3ನೇ ವಾದದಿಂದ ಉಚಿತ ತರಬೇತಿಗಳನ್ನು ನೀಡಲಾಗುತ್ತದೆ. ಈ ತರಬೇತಿಗಳು ಸ್ವ–ಉದ್ಯೋಗ ಪ್ರಾರಂಭಿಸಿ, ಸ್ವಾವಲಂಬಿ ಜೀವನ ನಡೆಸಲು ಅನುಕೂಲವಾಗಲಿವೆ. ತರಬೇತಿಯು ಊಟ ಹಾಗೂ ವಸತಿಯೊಂದಿಗೆ ಸಂಪೂರ್ಣ ಉಚಿತವಾಗಿದ್ದು, ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ತರಬೇತಿಯಲ್ಲಿ ಕೌಶಲ್ಯ, ಸಾಧನಾ ಪ್ರೇರಣಾ ತರಬೇತಿ, ಉದ್ಯಮಶೀಲತೇಯ ದಕ್ಷ ಗುಣಗಳು, ಹೊಸ ಉದ್ಯಮದ ಸ್ಥಾಪನೆ ಬಗ್ಗೆ ಮಾಹಿತಿ, ಮಾರುಕಟ್ಟೆ ಸಮೀಕ್ಷೆ, ಮಾರಾಟದ ತಂತ್ರಗಳು, ಯಶಸ್ವಿ ಉದ್ಯಮಗಳಿಂದ ಅನುಭವ ಹಂಚಿಕೆ, ಕ್ಷೇತ್ರ ಬೇಟಿ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿನಿಂದ ಸಾಲ ಪಡೆದು ಸ್ವ–ಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳ ಮತ್ತು ಯೋಜನಾ ವರದಿ ತಯಾರಿಕೆ ಇನ್ನಿತರ ಮಾಹಿತಿಗಳನ್ನು ನೀಡಲಾಗುತ್ತದೆ. ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸಗಳನ್ನು ನೋಂದಾಯಿಸಲು ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು.

ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ, ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ವಿಳಾಸಕ್ಕೆ ಅಥವಾ ಮೊ.ಸಂ: 8970145354, 9483485488, ಹಾಗೂ 9482188780 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

# ಗುಂಡಿಕ್ಕಿ ದರೋಡೆ ಕೋರರಿಬ್ಬರ ಸೆರೆ



**ಹುಬ್ಬಳ್ಳಿ :** ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿಇಂದುಬೆಳ್ಳಂಬೆಳಿಗ್ಗೆ ಗುಂಡಿನ ಮೊರೆತ ಕೇಳಿ ಬಂದಿದೆ, ಇಬ್ಬರುದರೋಡೆಕೋರರಕಾಲಿಗೆ ಪೊಲೀಸರು ಗುಂಡು ಹಾರಿಸಿ ಬಂಧಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡ ಇಬ್ಬರುಪೊಲೀಸ್‌ಸಿಬ್ಬಂದಿಹಾಗೂ ಗುಂಡೇಟಿನಿಂದ ಗಾಯಗೊಂಡ ದರೋಡೆಕೋರರನ್ನು ನಗರದ ಕಿಮ್ಸ್‌ಗೆ ದಾಖಲಿಸಲಾಗಿದ್ದು ಚಿಕಿತ್ಸೆ ನೀಡಲಾಗುತ್ತಿದೆ.

ಗುಂಡೇಟುತಿಂದುಗಾಯಗೊಂಡ ದರೋಡೆಕೋರರತಂಡದಹಿನ್ನೆಲೆ ರೋಚಕವಾಗಿದ್ದು, ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ಅದರ ವಿವರಗಳನ್ನು ಸುದ್ದಿಗಾರರೆದುರು ವಿವರಿಸಿದರು.

10 ರಿಂದ 20 ಜನರಿದ್ದ ಈ ದ–ರೋಡೆಕೋರರತಂಡಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಮಧ್ಯಪ್ರದೇಶ ರಾಜ್ಯಗಳಿಗೆ ಬೇಕಾದ ನಟೋರಿಯಸ್ ತಂಡವಾಗಿದೆಯೆನ್ನಲಾಗಿದ್ದು, ದೆಹಲಿ, ಉತ್ತರ ಪ್ರದೇಶಗಳಲ್ಲೂ ಸಕ್ರಿಯವಾಗಿತ್ತು.

ಇದೇ ತಿಂಗಳು ಮಹಾನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ಸುಮಾರು 20 ಲಕ್ಷರೂ. ಮೌಲ್ಯದ ವಸ್ತುಗಳ ಕಳ್ಳತನವಾಗಿದ್ದು, ಹಿಂದೆ ವಿದ್ಯಾಗಿರಿ, ಧಾರವಾಡ ಶಹರ, ಕೇಶ್ವಾಪುರ ಠಾಣಾ ವ್ಯಾಪ್ತಿಯಲ್ಲಿಯೂ ಇದೇ ಮಾದರಿ ಪ್ರಕರಣಗಳು ನಡೆದಿದ್ದವು. ಈ ತಂಡದ ದರೋಡೆಕೋರರನ್ನು ಟ್ರ್ಯಾಕ್‌ಮಾಡಿದಾಗಹುಬ್ಬಳ್ಳಿಯತ್ತ ಬರುತ್ತಿರುವಮಾಹಿತಿಲಭ್ಯವಾಗಿದೆ. ರಾಯನಾಳದ ಸಮೀಪದಲ್ಲಿ ದರೋಡೆಗಾಗಿ ಹೊಂಚು ಹಾಕಿ ಕುಳಿತಿ ದ್ದುದು ತಿಳಿದು ಬಂದಿದೆ. ತಂಡದ ಮೇಲೆ ದಾಳಿ ನಡೆಸಿ ಹಿಡಿಯಲೆತ್ನಿಸಿದ ಪೊಲೀಸ್ ಸಿಬ್ಬಂದಿ ಮೇಲೆ ದರೋಡೆ–ಕೋರರುಹಲ್ಲೆನಡೆಸಿಕಣ್ಣಿಗೆಕಾರದ ಪುಡಿ ಎರಚಿ ಪರಾರಿಯಾಗಲು ಯತ್ನಿಸಿದಾಗಮೊದಲುರಕ್ಷಣೆಗಾಗಿ ಗಾಳಿಯಲ್ಲಿಗುಂಡುಹಾರಿಸಿನಂತರ ದರೋಡೆಕೋರರಕಾಲಿಗೆಗುಂಡು ಹಾರಿಸಿ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ ಎಂದು ಆಯುಕ್ತರು ತಿಳಿಸಿದರು.

ಸದ್ಯ ಬಂಧಿತ ದರೋಡೆ–ಕೋರರು ಹಾಗೂ ಅವರ ತಂಡದ ವಿವರಗಳನ್ನು ಪೊಲೀಸರು ಸಂಗ್ರಹಿಸುತ್ತಿದ್ದು, ಘಟನೆಯಲ್ಲಿ ಗಾಯಗೊಂಡ ಪಿಎಸ್‌ಐ ದೇವೇಂದ್ರ ಮಾವಿನದಂಡಿ, ಸಿಬ್ಬಂದಿ ದ್ಯಾನೇಶ್, ಆನಂದ ಜಾವೂರ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

# ಮೈಸೂರು ಕಾಗದ ಕಾರ್ಖಾನೆ ಖಾಸಗಿಯವರಿಗೆ ಗುತ್ತಿಗೆ ನೀಡಲು ತೀರ್ಮಾನ




**ಬೆಂಗಳೂರು :** ಮೈಸೂರು ಕಾಗದದ ಕಾರ್ಖಾನೆ ತೀವ್ರತರದ ಹಣಕಾಸಿನ ಸಮಸ್ಯೆ ಎದುರಿಸುತ್ತಿದ್ದು, ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲವೆಂದು ಸರ್ಕಾರ ತೀರ್ಮಾನಿಸಿದೆ ಎಂದು ಸಚಿವ ಎಂ.ಬಿ. ಪಾಟೀಲ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಶಾಸಕ ಬಿ.ಕೆ. ಸಂಗಮೇಶ್ ಅವರ ಪ್ರಶ್ನೆಗೆ ಉತ್ತ–ರಿಸಿದ ಸಚಿವರು, ಕಾರ್ಖಾನೆಯ ಕಾರ್ಯಚಟುವಟಿಕೆಗಳನ್ನು ಖಾಸಗಿಯ ವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ತೀರ್ಮಾನಿಸಲಾಗಿದೆ.

2015–16ರಿಂದ ಕಾರ್ಖಾನೆಯ ಎಲ್ಲಾ ಉತ್ಪಾದನಾ ಘಟಕಗಳನ್ನು ಸ್ಥಗಿ–ತಗೊಳಿಸಲಾಗಿದೆ. 2024ರ ಜೂನ್ 30ರ ಅಂತ್ಯಕ್ಕೆ 1541.54 ಕೋಟಿ ರೂ. ನಷ್ಟು ನಷ್ಟದಲ್ಲಿದೆ ಎಂದು ಹೇಳಿದರು.

ಮೈಸೂರು ಕಾಗದ ಕಾರ್ಖಾನೆಗೆ ಸಂಬಂಧಿಸಿದಂತೆ ಎಫ್‌ಆರ್‌ಕ್ಯೂಗೆ ಯಾವುದೇ ಅರ್ಜಿ ಸ್ವೀಕೃತವಾಗಿಲ್ಲ. ಇ–ಟೆಂಟರ್ ಕರೆದಾಗಲೂ ಯಾವುದೇ ಬಿಡ್‌ಗಳು ಸ್ವೀಕೃತವಾಗಿಲ್ಲ.

2023ರ ನ. 17ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅರಣ್ಯ ಇಲಾಖೆಯ ತಜ್ಞರ ಸಮಿತಿಯು ನೀಲಗಿರಿ ಬೆಳೆಯಲು ಕಾರ್ಖಾನೆಗೆ ಮೀಸಲಾತಿ ನೀಡುವ ಸಂಬಂಧ ಪರಿಶೀಲನೆ ವರದಿ ನೀಡಬೇಕಾಗಿದೆ ಎಂಬ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ವಿದ್ಯುತ್ ಬಿಲ್‌ನ ಅಸಲಿ ಮತ್ತು ಬಡ್ಡಿ ಮೊತ್ತವನ್ನು ಮೆಸ್ಕಾಂ ಮನ್ನಾ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದೆ. ರಾಜ್ಯದಲ್ಲಿ ನೀಲಗಿರಿ ಬೆಳೆಯಲು ಕಾರ್ಖಾನೆಗೆ ವಿನಾಯಿತಿ ಬಯಸುತ್ತಾರೆ. ಹೀಗಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

2021ರ ಅಕ್ಟೋಬರ್ 7ರ ಆದೇಶದ ಪ್ರಕಾರ ಕಾರ್ಖಾನೆಯ ಎಲ್ಲಾ ಉತ್ಪಾದನಾ ಚಟುವಟಿಕೆಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ. ಪರಿಹಾರವನ್ನು ಹಾಗೂ ಇತರ ಕಾನೂನು ಬಾಕಿಗಳನ್ನು ಕಂಪೆನಿಯು ಅವರವರ ಬ್ಯಾಂಕ್ ಖಾತೆಗೆ ಪಾವತಿಸುವ ಮೂಲಕ 202 ಉದ್ಯೋಗಿಗಳ ಸೇವೆಯನ್ನು ಕೊನೆಗೊಳಿಸಲಾಗಿದೆ ಎಂದರು.

ಸರ್ಕಾರದ ಆದೇಶವನ್ನು ಪ್ರಶ್ನಿಸಿ ಕಾರ್ಮಿಕ ಸಂಘ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದು ನಿಯೋಜನೆ ಹೊಂದದೆ ಉಳಿದಿದ್ದವ–ರಿಗೆ ನಿಗಮ ಮಂಡಳಿಗಳಲ್ಲಿ ನಿಯೋಜನೆ, ವಿಲೀನದ ಆಧಾರದ ಮೇಲೆ ಉದ್ಯೋಗ ನೀಡಬೇಕೆಂದು ಆದೇಶಿಸಲಾಗಿದ್ದು, ಅದರಂತೆ ಕ್ರಮ ವಹಿಸಲಾಗಿದೆ ಎಂದು ಅವರು ಹೇಳಿದರು.

# 30 ನೇ ವರ್ಷದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕಿಕ್ಕೇರಿ ಠಾಣೆಯ ಪಿಎಸ್‌ಐ ಡಾ. ರೇವತಿಯವರು ಕೇಕ್ ಕತ್ತರಿಸುವ ಮೂಲಕ ಆಚರಣೆ



30 ನೇ ವರ್ಷದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಕರ್ನಾಟಕ ಯುವ ರಕ್ಷಣಾ ವೇದಿಕೆ ಯ ತಾಲೋಕು ಅಧ್ಯಕ್ಷರಾದ ಜಾವಿದ್ ರವರ ನೇತೃತ್ವದಲ್ಲಿ ಕೆ ಆರ್ ಪೇಟೆ ತಾಲೋಕ್ ಕಿಕ್ಕೇರಿ ಠಾಣೆಯ ಪಿಎಸ್‌ಐ ಡಾ.ರೇವತಿಯವರಿಗೆ ಮಹಿಳಾ ದಿನಾಚರಣೆ ಅಂಗವಾಗಿ ಕೇಕ್ ಕತ್ತರಿಸುವ ಮೂಲಕ ಮಹಿಳಾ ದಿನಾಚರಣೆಯನ್ನು ಆಚರಿಸಿ ಶುಭ ಕೋರಲಾಯಿತು,

ಈ ಸಂದರ್ಭದಲ್ಲಿ ಮಾತನಾಡಿದ ರೇವತಿಯವರು, ಮಹಿಳೆಯರು ಅಬಲೆಯರು ಅಲ್ಲ ಸಾಬಲೆಯರು ಕಿತ್ತೂರ ರಾಣಿ ಚೆನ್ನಮ್ಮ, ಒನಕೆ ಓಬವ್ವ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಇವರೆಲ್ಲರು ಮಹಿಳೆಯರೇ ಇವರಂತೆ ಯೇ ಸಾಧನೆ ಮಾಡಬೇಕು ಇವತ್ತಿನ ಹೆಣ್ಣುಮಕ್ಕಳು ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಯುವ ರಕ್ಷಣಾ ವೇದಿಕೆಯ ತಾಲೋಕ್ ಅಧ್ಯಕ್ಷರಾದ ಜಾವಿದ್ , ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೋವಿಂದ್ ರಾಜ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ವಿ ಲೋಕೇಶ್ ಮಕುವಳ್ಳಿ ರಂಗನಾಥ್ ಮತ್ತು ಠಾಣೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಹರಿಜನಕೇರಿಯಲ್ಲಿ ಸಡಗರದ ರಂಗೋತ್ಸವ

ರಬಕವಿಯ ಹರಿಜನ ಕೇರಿಯಲ್ಲಿ ಹರಿಜನ ಮತ್ತು ಸಿಕ್ಕಲಗಾರ ಸಮಾಜದ ವತಿಯಿಂದ ರಂಗೋತ್ಸವ ಜರುಗಿತು.

ಶೇಖರ ಹಳಿಂಗಳಿ ನೇತೃತ್ವದ ಯುವಕ ಸಂಘ ಆಯೋಜಿಸಿದ್ದ ರಂಗೋತ್ಸವದಲ್ಲಿ ಮಹಿಳೆಯರು,

ಯುವಕರು ಎತ್ತರ ಪ್ರದೇಶದಲ್ಲಿ ನಲ್ಲಿ ಅಳವಡಿಸಿ ಅದರಲ್ಲಿನ ಬಣ್ಣದ ದ್ರಾವಣದಲ್ಲಿ ಬಣ್ಣವಾಡಿದರು. ಡಿಜೆ ಸೌಂಡ್‌ಗೆ ಯಹವಕರು, ಯುವತಿಯರು ನರ್ತಿಸಿ ಸಂಭ್ರಮಿಸಿದರು.

**ರಬಕವಿ ನಗರದ ಮಟ್ಟಿಕಲ್ಲಿ ಲೇನ್‌ನಲ್ಲಿನ ಮಹಿಳೆಯರು, ಮಕ್ಕಳು ಹೋಳಿ ಹಬ್ಬದಂದು ಬಣ್ಣವಾಡಿ ಸಂಭ್ರಮಿಸಿದರು.**



## ಜಹೂರ್‌ಅಹ್ಮದ ಚೌಧರಿ ನಿಧನ



**ಕಲಾದಗಿ :** ಇಲ್ಲಿಯ ಮುಸ್ಲಿಂ ಸಮಾಜದ ಹಿರಿಯ ಮುಖಂಡ ಜಹೂರ್ ಅಹ್ಮದ್ ಚೌಧರಿ (83) ಶುಕ್ರವಾರ ನಿಧನರಾಗಿದ್ದಾರೆ. ಇವರ ಅಂತಕ್ರಿಯೆ ಶನಿವಾರ ಮುಂಜಾನೆ 9: ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618